164
Rare 6
ಶೀ: ವೈಶಾಖಿ
ಕನ್ನಡ ವಿಶ್ವವಿದ್ಯಾಲಯ
ಮಾತೆಯಿದು ಪ್ರಾಚರ್ಯಂಗ
ಶೀ: ಗೋವಿಂದ ಪೈ
ಪರಾಮರ್ಶನ ಗ್ರಂಥ
ಶೀ: ಸಂ: 091760
ಅಕ್ಷರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.
1947

ಪರಾಮರ್ಶಗಾನಿ

1947

(All rights reserved.)

8K1.6
PAI

ಕ್ರಯ: ೧೨ ಆಣೆ

ಪ್ರಕಾಶಕರು:
ಬಾಳಿಗಾ ಬಂಡ್ ಸನ್ಸ್, ಮಂಗಳೂರು, ದ. ಕ.

To Sri Ammembal Shankaranarayan
with regards Sr.

ಕ.ಪ. ೬೦

ವೈಶಾಖಿ

ಅಥವಾ

ಬುದ್ಧನ ಕಡೆಯ ದಿನ

ಗೋವಿಂದ ಪೈ
ಮಂಜೇಶ್ವರ

ಹರಾಮಶೇಗಾನಿ

ಪ್ರಕಾಶಕರು:
ಬಾಳಿಗಾ ಎಂಡ್ ಸನ್ಸ್, ಮಂಗಳೂರು, ದ. ಕ.

1947

091760

8K1.6
PAIM



Printed at the Basel Mission Press, Mangalore,
P. I. C. Q. H. No. S.K. 1—30-5-'47.

ಮುನ್ನುಡಿ

ಇದು ನನ್ನ ಗೊಲ್ಗೊಥದ ಜತೆಯ ಕಾವ್ಯ. ಇದನ್ನು ರಚಿಸಬೇಕೆಂದು ಹಲವು ವರ್ಷಗಳ ಹಿಂದಿನಿಂದಲೇ ಬಗೆದಿದ್ದೆನಾದರೂ, ಒಂದಲ್ಲ ಒಂದು ಎಡರು ತಟ್ಟಿ ಆ ಕೋರಿಕೆಯನ್ನು ಇದುವರೆಗೆ ನೆರವೇರಿಸಲಾಗಲಿಲ್ಲ.

ಇದನ್ನು ರಚಿಸುವಲ್ಲಿ ಸಹಜವಾಗಿ ಬೌದ್ಧಧರ್ಮಗ್ರಂಥವಾದ ಪಾಲಿ ಭಾಷೆಯ ಮಹಾಪರಿನಿಬ್ಬಾನ ಸುತ್ತ (ಮಹಾಪರಿನಿರ್ವಾಣ ಸೂತ್ರ)ವನ್ನು ಆಧರಿಸಿರುತ್ತೇನೆ. ಆದರೆ ಆ ಸೂತ್ರದಲ್ಲಿ ಬುದ್ಧನ ಪರಿನಿರ್ವಾಣದ ಕಥೆಯಾದರೊ ಆ ಮಹಾಘಟನೆಗೆ ಕೆಲಕಾಲದ ಹಿಂದಿನಿಂದ ಪ್ರಾರಂಭಿಸಿ ಅದಾದ ಬಳಿಕಲೂ ಕೆಲ ದಿನಗಳಿಗೆ ಮುಂದರಿಸುವುದರಿಂದ, ಅದೊಂದೇ ದಿನದ ಕಥೆಯುಳ್ಳ ಈ ಕಾವ್ಯಕ್ಕೆ ತಕ್ಕಂತೆ ಆ ಘಟನೆಯಂದಿನ ಕಥೆಯನ್ನು ಒಳಕೊಂಡಿರುವ (IV. ೧೯ರಿಂದ VI. ೨೦ ವರೆಗಣ) ಭಾಗವನ್ನು ಮಾತ್ರ ಆ ಸೂತ್ರದಿಂದ ಇದರಲ್ಲಿ ಆಯ್ದುಕೊಂಡದೆ. ಅದರಲ್ಲಾದರೂ ಈ ಕಾವ್ಯದ ಮಟ್ಟಿಗೆ ಅಸಂಗತವೆನಿಸಿದ ಆಯಾ ಕೆಲವು ಮಾತುಕಥೆಗಳನ್ನು ವಿಸರ್ಜಿಸಿ, ಈ ಕಾವ್ಯದಲ್ಲಿ ಸಂದರ್ಭೋಚಿತವಾಗಿ ಅಲ್ಲಲ್ಲಿ ಬುದ್ಧನ ಧರ್ಮದೇಶನೆ ಬಾರದಿದ್ದರೆ ಇದೊಂದು ಅಪ್ಪಟ ಬೌದ್ಧ ಕಾವ್ಯವೆನಿಸಲಾರದ ಕಾರಣ, ಆ ತಕ್ಕ ಜೀವಕಳೆ ಇದರಲ್ಲಿ ಮಿಸುಕಾಡುವಂತೆ ಆ ಸೂತ್ರದಲ್ಲಿ ಇಲ್ಲದ ಕೆಲವು ಅಂಶಗಳನ್ನು ಇತರ ಬೌದ್ಧ ಗ್ರಂಥಗಳಿಂದ ಈ ಕಾವ್ಯದಲ್ಲಿ ಇಸಕೊಂಡದೆ. ಹಾಗೆ ಕೂಡಿಸಿಕೊಂಡ ಉಪದೇಶಗಳನ್ನು ಎಲ್ಲೆಲ್ಲಿಂದ ಎತ್ತಿಕೊಂಡದೆಂದು ಟಿಪ್ಪಣಿಯಲ್ಲಿ ಆಯಾ ಯಥಾಸ್ಥಾನದಲ್ಲಿ ಸೂಚಿಸಿದೆ.

ನನ್ನ ಗೊಲ್ಗೊಥದ ಪ್ರಥಮ ಮುದ್ರಣದಲ್ಲಿಯೂ ನನ್ನ ಹೆಬ್ಬೆರಳಿನಲ್ಲಿಯೂ ಆಯಾ ಕೃತಿಯ ಕಥಾವಸ್ತುವನ್ನು ಸಂಗ್ರಹಿಸಿಲ್ಲದ ಕೊರತೆಯ ಕಡೆಗೆ ಗೆಳೆಯರೊಬ್ಬರು ನನ್ನ ಗಮನವನ್ನು ಸೆಳೆದಿರುವುದರಿಂದ, ಆ ನ್ಯೂನತೆಯನ್ನು ನೀಗಾಡಿಸುವ ಬಗ್ಗೆ ಈ ಕಾವ್ಯದ ಕಥಾಸಾರವನ್ನು ಇಲ್ಲಿ ಸಂಕ್ಷೇಪವಾಗಿ ಹೇಳುತ್ತೇನೆ.

ಕಪಿಲವಸ್ತು ಎಂಬ ಚಿಕ್ಕದೊಂದು ಪ್ರಾಯಶಃ ಮಹಾಜನಸತ್ತಾತ್ಮಕವಾದ (republic) ರಾಜ್ಯದ ಒಡೆಯನಾದ ಶಾಕ್ಯವಂಶದ ಶುದ್ಧೋದನನ ಹಿರೇ ಹೆಂಡತಿಯಾದ ಮಾಯಾ ದೇವಿಯ ಬಸಿರಲ್ಲಿ ಭಾವಿ ಬುದ್ಧನು ಲುಂಬಿನೀ ವನ

ದಲ್ಲಿ ಕ್ರಿ. ಪೂ. ೫೮೦ ಏಪ್ರಿಲ್ ೧೯ನೆಯ ತಾರೀಕು ಶುಕ್ರವಾರ* ವೈಶಾಖಿ ಅಂದರೆ ವೈಶಾಖ ಹುಣ್ಣಿಮೆಯಂದು ಜನ್ಮವೆತ್ತಿದನು.

ಸೋ ಬೋಧಿಸತ್ತೋ..... ಜಾತೋ
ಸಕ್ಯಾನಂ ಗಾಮೇ ಜನಪದೇ ಲುಂಬಿನೆಯ್ಯೇ ॥ ೫ ॥೧

ಅವನು ಹುಟ್ಟಿದ ೭ನೆಯ ದಿನದಲ್ಲಿ ತಾಯಿ ಕಾಲವಾದಳು. ಅವನ ತಾಯಿಯ ತಂಗಿಯೂ ಅವನ ಮಲತಾಯಿಯೂ ಆದ ಪ್ರಜಾಪತಿ ಗೌತಮಿ ಅವನನ್ನು ಬೆಳಸಿದಳು. ಪ್ರಾಪ್ತವಯಸ್ಕನಾಗುತ್ತಲೆ ಆತನಿಗೆ ಯಶೋಧರೆ ಎಂಬ ರಾಜಕನ್ನೆಯೊಡನೆ ವಿವಾಹವಾಗಿ, ಅವರಿಗೆ ರಾಹುಲನೆಂಬ ಮಗನು ಹುಟ್ಟಿದನು. ಮಗು ಹುಟ್ಟಿದ ತುಸಕಾಲದಲ್ಲಿ ಆತನು

ಕಾಮೇಸ್ವಾದೀನವಂ ದಿಸ್ವಾ ನೆಕ್ಖಮ್ಮಂ ದಟ್ಠು ಖೇಮತೋ ॥ ೨೦ ॥೨

ಅಂದರೆ ಇಂದ್ರಿಯೋಪಭೋಗಗಳಲ್ಲಿ ದುಃಖವನ್ನೂ ಸಂಸಾರತ್ಯಾಗದಲ್ಲಿ ಸುಖವನ್ನೂ ಕಂಡು, ಅದರೊಂದಿಗೆ ಜನ್ಮ, ಜರೆ, ರುಜೆ, ಮರಣ, ಶೋಕ ಇವುಗಳಿಂದ ಉಂಟಾಗುವ ಹಾನಿಯನ್ನೂ ಮನನಿಸಿ, ಇನ್ನು ಅವುಗಳಿಂದ ಸಂಬದ್ಧನಾಗಿದ್ದು ಹಾಗೆಯೇ ತಾವೂ ಸಂಬದ್ಧರಾಗಿರುವ ಪುತ್ರದಾರಾದಿಗಳ ಬೆನ್ನುಬಿದ್ದಿರುವುದು ಸರಿಯಲ್ಲ, ತಾನಿನ್ನು ಅಜಾತ, ಅಜರ, ಅರುಜ, ಅಮರ ಹಾಗೂ ಅಶೋಕವಾದ ಯಾವ ಪರಮಶ್ರೇಷ್ಠವಾದ ನಿರ್ವಾಣಪದವಿದೆಯೊ ಅದನ್ನು ಶೋಧಿಸುವೆನೆಂದು ತನ್ನ ೨೯ನೆಯ ವರ್ಷದಲ್ಲಿ ಮನೆಯಿಂದ ಹೊರಟು ಹೋಗಿ,

ಅಬ್ಭೋಕಾಸೋ ಚ ಪಬ್ಬಜ್ಜಾ ಇತಿ ದಿಸ್ವಾನ ಪಬ್ಬಜಿ ॥ ೨ ॥೩

ಅಂದರೆ ಬಯಲಿನ ಬಾಳ್ವೆ (open-air life)ಯಾದ ಪ್ರವ್ರಜ್ಯೆಯನ್ನು ಕೈಕ್ಕೊಂಡನು.

ಆ ಬಳಿಕ ಆತನು ಊರಿಂದ ಊರಿಗೆ ಹೋಗುತ್ತಾ ಕೊನೆಗೆ ಗಯಾಕ್ಷೇತ್ರದ ಬಳಿಯ ನೇರಂಜರೆ ಎಂಬ ನದಿಯ ತಡಿಯಣ ಉರುವೇಲೆ ಎಂಬಲ್ಲಿಗೆ ಬಂದು, ಅಲ್ಲಿ ನಿರ್ವಾಣವನ್ನು ಉದ್ದೇಶಿಸಿ ಧ್ಯಾನಾಸಕ್ತನಾಗಿದ್ದಾಗ, ತನ್ನನ್ನು ೭ ವರ್ಷ ಅಡಿಗಡಿಗೆ ಕಾಡಿದ—

ಸತ್ತ ವಸ್ಸಾನಿ ಭಗವಂತಂ ಅನುಬಂಧಿ ಪದಾಪದಂ ॥ ೨೨ ॥೪

---

೧ ಸುತ್ತನಿಪಾತದ ನಾಳಕ ಸುತ್ತ.
೨ ಅದರದೇ ಪಬ್ಬಜ್ಜಾಸುತ್ತ.
೩ ಅದೇ ಪಬ್ಬಜ್ಜಾಸುತ್ತ.
೪ ಸುತ್ತನಿಪಾತದ ಪಧಾನಸುತ್ತ.

ಪಾಪಪುರುಷನಾದ ನಮುಚಿಯೂ ಎಂಬ ಮಾರನನ್ನು ಗೆದ್ದು, ತನ್ನ ೩೫ನೆಯ ವರ್ಷ ತುಂಬಿ ೩೬ನೆಯ ವರ್ಷ ತೊಡಗುವ ಕ್ರಿ. ಪೂ. ೫೪೬ ಏಪ್ರಿಲ್ ೩ನೆಯ ತಾರೀಕು ಬುಧವಾರದ* **ವೈಶಾಖಿಯ** ಅಂದರೆ ವೈಶಾಖ ಹುಣ್ಣಿಮೆಯ ನಿಶೀಥದಲ್ಲಿ ಆರ್ಯ ಅಷ್ಟಾಂಗಿಕ ಮಾರ್ಗವೆಂಬ ಧರ್ಮಮಾರ್ಗವನ್ನು ಕಂಡು ಹಿಡಿದು ತಾನು ಬುದ್ಧನಾದನು, ಸಮ್ಮಾಸಂಬುದ್ಧನಾದನು. ಅನಂತರ ಅಲ್ಲಿಂದ ಕಾಶಿಗೆ ಹೋಗಿ ಅಲ್ಲಿ ಕೆಲ ವರ್ಷಗಳ ಹಿಂದೆ ತನ್ನ ಜತೆಗಾರರಾಗಿದ್ದ ಭಿಕ್ಷುಗಳಿಗೆ ಆ ಮಾರ್ಗವನ್ನು ಉಪದೇಶಿಸಿದನು. ಆ ಉಪದೇಶಕ್ಕೆ ಧರ್ಮಚಕ್ರಪ್ರವರ್ತನ ಎಂದು ಹೆಸರು. ಲೋಕಪ್ರಥಿತವಾದ ಆ ಉಪದೇಶವು ಬೌದ್ಧ ಧರ್ಮಗ್ರಂಥಗಳಲ್ಲಿ ಧಮ್ಮಚಕ್ಕಪ್ಪವತ್ತನ ಸುತ್ತ* ಎಂದು ಹೆಸರಾಗಿದೆ. ಆ ಮೇಲೆ ೪೫ ವರ್ಷ ಊರೂರನ್ನು ಸುತ್ತಾಡುತ್ತ, ತನ್ನ ಧರ್ಮವನ್ನು ಅಲ್ಲಲ್ಲಿ ಬೋಧಿಸುತ್ತ, ಕಾಶಿ, ರಾಜಗೃಹ, ಶ್ರಾವಸ್ತಿ, ಕೌಶಾಂಬಿ ಮೊದಲಾದ ನಗರಗಳಲ್ಲಿ ಆಯಾ ವರ್ಷಾಕಾಲವನ್ನು ಕಳೆಯುತ್ತ ಕೊನೆಗೆ ಪಾವೆಗೆ ಬಂದನು.

ಪಾವೆಯಲ್ಲಿ ಬುದ್ಧನು ತನ್ನ ೮೦ನೆಯ ವರ್ಷ ತುಂಬುವ ಒಂದೆರಡು ದಿನಗಳ ಮುಂಚೆ ಚುಂದನೆಂಬ ಕಮ್ಮಾರನ ಮನೆಯಲ್ಲಿ ಬಡಿಸಿದ 'ಸೂಕರ ಮದ್ದವ'ವನ್ನು ಉಂಡನು. ಸೂಕರ ಮದ್ದವವೆಂದರೆ ಇದುವರೆಗೆ ಕಾಡುಹಂದಿಯ ಒಣ ಮಾಂಸ (dried boar's flesh) ಎಂದೇ ಬಗೆಯಲ್ಪಡುತ್ತಿದ್ದರೂ, ಈಗ ಅದು ಮಾಂಸವೇ ಅಲ್ಲ, ಯಾವೊಂದು ಬಗೆಯ ಅಣಬೆ (fungus), ಅತಏವ ಶಾಕ ಪದಾರ್ಥವೆಂದು ಗೊತ್ತಾಗಿದೆ.† ಅಲ್ಲಿಂದ ಆತನಿಗೆ ದುಃಸಹವಾದ ಬಸುಗುತ್ತ ಅಂದರೆ ಆಮಶಂಕೆ ತೊಡಗಿ, ತನ್ನ ೮೦ನೆಯ ವರ್ಷ ತುಂಬುವ—

ಅಸೀತಿಕೋ ಮೇ ವಯೋ ವತ್ತತಿ‡—

ವೈಶಾಖ ಪೂರ್ಣಿಮೆಯ ಉಷಃಕಾಲದಲ್ಲಿ, ಅಂದಿಗೆ ೪೫ ವರ್ಷಗಳ ಹಿಂದೆ ಉರುವೇಲೆಯಲ್ಲಿಯೂ ೩ ತಿಂಗಳ ಹಿಂದೆ ವೈಶಾಲಿಯಲ್ಲಿಯೂ ತನಗೂ ಮಾರನಿಗೂ ಆದ ಮಾತುಕಥೆಯನ್ನು ಭಿಕ್ಷುಗಳಿಗೆ ಅರುಹಿ, ಅಂದಿನ ರಾತ್ರಿಯಲ್ಲಿ ತಾನು ಪರಿನಿರ್ವಾಣ ಹೊಂದುವೆನೆಂದೂ ಅವರಿಗೆ ತಿಳುಹಿ, ಹೇಗೂ ಆಸತ್ತು ಬೇಸತ್ತು ಪಾವೆಯಿಂದ ಹೊರಟು ಕುಶಿನಾರದ ಹಾದಿಹಿಡಿದನು.

---

* ಈ ಕಾವ್ಯದ ೫೪೭ರಿಂದ ೫೬೫ ವರೆಗಣ ಬಂತಿಗಳಲ್ಲಿ ಆ ಸುತ್ತವನ್ನು ಸಂಗ್ರಹಿಸಿದೆ.

† Annals of the Bhandarkar Oriental Research Institute, Silver Jubilee Volume 1942, ಪು. ೧೩೭—೧೩೯.

‡ ಮಹಾಪರಿನಿಬ್ಬಾನ ಸುತ್ತ, II. ೩೫.

ದಾರಿಯಲ್ಲಿ ತನ್ನ ಅಕ್ಕರೆಯ ಶಿಷ್ಯನಾದ ಆನಂದನಿಂದ ನೀರು ತರಿಸಿಕೊಂಡು ಕುಡಿದು ಒಂದು ಮರದ ಬುಡದಲ್ಲಿ ಕುಳಿತುಕೊಂಡಿದ್ದಾಗ, ಆ ಹಾದಿಯಾಗಿ ಹೋಗುತಿದ್ದ ಪುಕ್ಕುಸನೆಂಬ ಮಲ್ಲನು ಬುದ್ಧನು ಅಲ್ಲಿ ತಂಗಿರುವನೆಂದು ಅರಿತು, ಆತನಿದ್ದಲ್ಲಿಗೆ ಬಂದು, ಆತನಿಂದ ಧರ್ಮೋಪದೇಶ ಹೊಂದಿ, ಆತನಿಗೆ ೨ ಹೊಂಬಟ್ಟೆಗಳನ್ನು ಕಾಣಿಕೆಯಾಗಿತ್ತ್ತು, ಆತನೆಂದ ಮೇರೆಗೆ ಅವಲ್ಲಿ ಒಂದನ್ನು ಆತನಿಗೂ ಮತ್ತೊಂದನ್ನು ಆನಂದನಿಗೂ ಹೊದಿಸಿ ಅವನನ್ನು ಬೀಳ್ಕೊಂಡು ಮುಂದೆ ಹೋದನು. ಬುದ್ಧನು ಅಲ್ಲಿಂದ ಮುಂದುವರಿದು ಕಕುತ್ಥಾನದಿಯಲ್ಲಿ ಮಿಂದು, ಮಗ್ಗುಲಲ್ಲಿದ್ದ ಆಮ್ರವನವನ್ನು ಹೊಕ್ಕು ಅಲ್ಲಿ ಕೊಂಚ ವಿಶ್ರಮಿಸುತಿದ್ದಾಗ, ಚುಂದನು ಬಡಿಸಿದ ಸೂಕರ ಮದ್ದವವು ತನ್ನ ಕೊನೆಯ ತುತ್ತಾಯಿತೆಂದು ಆತನನ್ನು ದೂರದಿರಿ, ಅದರ ಫಲವು ಎಷ್ಟು ಮೇಲಾಗಿದೆ ಎಂದು ಭಿಕ್ಷುಗಳಿಗೆ ಬೋಧಿಸಿ, ಅಲ್ಲಿಂದ ಮುನ್ನಡೆದು ಅಂದಿನ ಇಳಿಹೊತ್ತಿನಲ್ಲಿ ಗಣರಾಜ್ಯವಾದ (republic) ಕುಶಿನಾರದಲ್ಲಿರುವ ಮಲ್ಲರ ಸಾಲವನಕ್ಕೆ ಹೋಗಿ ಅಲ್ಲಿ ಉತ್ತರ ಶೀರ್ಷವಾಗಿ ಮಲಕೊಂಡವನು ಮತ್ತೆ ಏಳಲಿಲ್ಲ.

ಸಾಲವನದಲ್ಲಿ ಬುದ್ಧನು ಹಾಗೆ ಮಲಗಿದ್ದಾಗಿ, ಆನಂದನು ಕೇಳಿದ ಕೆಲವು ಪ್ರಶ್ನೆಗಳಿಗೆ ಆತನು ಉತ್ತರವಿತ್ತು, ಸದರ್ಥದಲ್ಲಿ ಪ್ರವರ್ತಿಸಬೇಕೆಂದು ಭಿಕ್ಷುಗಳಿಗೆ ಪ್ರಬೋಧಿಸಿ, ತನ್ನ ಪರಿನಿರ್ವಾಣಕ್ಕೆ ಕುಶಿನಾರವೇ ಯಥೋಚಿತವಾದ ಸ್ಥಾನವೆಂದು ಆನಂದನನ್ನು ಸಮಜಾಯಿಸಿ, ಅದು ಅಂದಿನ ರಾತ್ರಿಯಲ್ಲಿ ಆಗಲಿಕ್ಕಿದೆ ಎಂದು ಅಲ್ಲಿಯ ಮಲ್ಲರಿಗೆ ಅರುಹಿ ಬಾರೆಂದು ಆತನನ್ನು ಆ ಸಂಜೆ ಅವರಲ್ಲಿಗೆ ಪ್ರೇಷಿಸಿದನು. ಆನಂದನು ಅವರಿಗೆ ಹಾಗೆ ತಿಳಿಸುತ್ತಲೆ ಅವರೆಲ್ಲರು ಗೋಳಾಡಿ ಬುದ್ಧನಿದ್ದಲ್ಲಿಗೆ ಬಂದು ಆತನನ್ನು ವಂದಿಸಿ, ಆತನು ಮಾಡಿದ ಧರ್ಮೋಪದೇಶವನ್ನು ಕೇಳಿ ಆತನನ್ನು ಬೀಳ್ಕೊಂಡು ಮರಳಿದರು.

ಆಗ ಕುಶಿನಾರದಲ್ಲಿದ್ದ ಸುಭದ್ರನೆಂಬ ಪರಿವ್ರಾಜಕನು ಬುದ್ಧನು ಅಂದೇ ರಾತ್ರಿ ಪರಿನಿರ್ವಾಣವಯ್ದುವನೆಂದು ಕೇಳಿ, ಆತನ ದರ್ಶನಾಕಾಂಕ್ಷಿಯಾಗಿ ಸಾಲವನಕ್ಕೆ ಬಂದು, ತನಗೊಮ್ಮೆ ಬುದ್ಧನನ್ನು ಕಾಣಿಸಬೇಕೆಂದು ಆನಂದನೊಡನೆ ಯಾಚಿಸಿದುದಕ್ಕೆ ಮರುನುಡಿಯಾಗಿ ಆನಂದನು ಬುದ್ಧನು ತೀರ ದಣಿದಿರುವ ಕಾರಣ ಅದು ಸಲ್ಲದೆಂದ ಅವರ ಮಾತುಗಳನ್ನು ಆಲಿಸಿದ ಬುದ್ಧನು ಸುಭದ್ರನನ್ನು ತನ್ನ ಬಳಿಗೆ ಬರಿಸಿಕೊಂಡು, ಆತನಿಗೆ ಧರ್ಮದೇಶನೆಯನ್ನಿತ್ತು ಆತನ ಬೇಡಿಕೆಯ ಮೇರೆಗೆ ಆತನಿಗೆ ಆನಂದನಿಂದ ಪ್ರವ್ರಜ್ಯೆಯನ್ನು ಕೊಡಿಸಿ

ಆತನನ್ನು ತನ್ನ ಕೊನೆಯ ಸಾಕ್ಷಾಚ್ಛಾವಕನಾಗಿ ಭಿಕ್ಷುಸಂಘದಲ್ಲಿ ಸೇರಿಸಿ ಕೊಂಡನು.

ಅನಂತರ ಬುದ್ಧನು ಈ ದೇಹವು ನಾಶಕ್ಕೆ ಈಡಾಗಿದೆ, ಸಾವಧಾನದಿಂದ ಉದ್ಯೋಗಿಸಿರಿ! ಎಂದು ಭಿಕ್ಷುಗಳಿಗೆ ತನ್ನ ಕೊನೆಯ ಮಾತನ್ನು ಹೇಳಿ ಮುಗಿಸಿ ದವನೇ ಆತನು ಕ್ರಮಶಃ ಪ್ರಥಮದಿಂದ ಚತುರ್ಥದ ವರೆಗಣ ಧ್ಯಾನಗಳನ್ನೂ ಅಲ್ಲಿಂದ ವಿವಿಧಾಯತನಗಳನ್ನೂ ಸಮಾಪದಿಸಿ, ಸಂಜ್ಞಾನಿರೋಧ ಸಮಾಧಿಯ ಲ್ಲಿದ್ದು, ಅಲ್ಲಿಂದ ಮರಳಿ ಅನುಕ್ರಮವಾಗಿ ಚತುರ್ಥದಿಂದ ಪ್ರಥಮದ ವರೆಗಣ ಧ್ಯಾನಗಳನ್ನು ಸಮಾಪದಿಸಿ, ಅಲ್ಲಿಂದಲೂ ಮರಳಿ ದ್ವಿತೀಯದಿಂದ ಚತುರ್ಥದ ವರೆಗಣ ಧ್ಯಾನಗಳನ್ನು ಸಮಾಪದಿಸಿ, ಆ ವೈಶಾಖಿಯ ಅಂದರೆ ಕ್ರಿ. ಪೂ. ೫೦೧ ಏಪ್ರಿಲ್ ೧೫ನೆಯ ತಾರೀಕು ಕುಜವಾರದಂದಿನ* ವೈಶಾಖ ಪೂರ್ಣಮಿಯ ರಾತ್ರಿಯ ಕೊನೆಯ ಜಾಮದಲ್ಲಿ ಭಗವಂತನು ಪರಿನಿರ್ವಾಣ ಹೊಂದಿದನು.

ಒಡನೆಯೇ ಭೂಕಂಪವಾಯಿತು, ದೇವದುಂದುಭಿ ಮೊಳಗಿತು, ಮೇಘ ನಿರ್ಘೋಷವಾಯಿತು, ವಿದ್ಯುದಾವಿರ್ಭಾವವಾಯಿತು, ಮುಹೂರ್ತ ಮಾತ್ರಕ್ಕೆ ಧಾರಾಸಂಪಾತವೂ ಆಯಿತು. ಆಗ್ಗೆ ಸಹಂಪತಿ ಬ್ರಹ್ಮನೂ ದೇವೇಂದ್ರ ಶಕ್ರನೂ ಭಿಕ್ಷುಗಳಾದ ಅನುರುದ್ಧನೂ ಆನಂದನೂ ಆ ಮಹಾಘಟನೆಯನ್ನು ಕುರಿತು ಆಯಾ ಗಾಥೆಗಳನ್ನು ಉದ್ಗಾರಿಸಿದರು. ಆ ಬಳಿಕ ಆ ಭಿಕ್ಷುಗಳಿಬ್ಬರೂ ಮಿಕ್ಕ ರಾತ್ರಿಯನ್ನು ಧರ್ಮ ಕಥಾಪ್ರಸಂಗದಲ್ಲಿ ಕಳೆದರು.

ಈ ಕಾವ್ಯವನ್ನು ರಚಿಸಲಿಕ್ಕೆ ಆವಶ್ಯಕವಾದ ಪಾಲಿಭಾಷೆಯ ಮಹಾಪರಿ ನಿಬ್ಬಾನಸುತ್ತವನ್ನು ನನಗೆ ಎರವಿತ್ತ ಬಗ್ಗೆ ಬೆಂಗಳೂರಿನ ಪಾಲಿ ವಿದ್ವಾನ್ ಶ್ರೀ ಜಿ. ಪಿ. ರಾಜರತ್ನರಿಗೂ, ಇದನ್ನು ಪ್ರಕಾಶಿಸಿರುವ ಬಗ್ಗೆ ಮಂಗಳೂರಿನ ಶ್ರೀ ಬಿ. ದಾಮೋದರ ಬಾಳಿಗರಿಗೂ, ಇದನ್ನು ಅಂದವಾಗಿ ಮುದ್ರಿಸಿರುವ ಬಗ್ಗೆ ಮಂಗಳೂರಿನ ಬಾಸೆಲ್ ಮಿಶ್ಯನ್ ಮುದ್ರಣಾಲಯದವರಿಗೂ ತುಂಬ ಕೃತಜ್ಞ ನಾಗಿರುತ್ತೇನೆ.

ಇತಿ ಶಮ್

ಮಂಜೇಶ್ವರ
ಸರ್ವಜಿತ್ ಸಂ| ವೈಶಾಖಿ
೫ ಮೇ ೧೯೪೭

ಗೋವಿಂದ ಪೈ.

---

* ಬುದ್ಧನ ಜನನ, ಬೋಧಿಜ್ಞಾನ ಹಾಗೂ ಪರಿನಿರ್ವಾಣಗಳ ಆಯಾ ವೈಶಾಖ ಹುಣ್ಣಿಮೆಗಳಿಗೆ ಸರಿಯಾದ ಈ ತಾರೀಕು-ವಾರಗಳನ್ನು ಕುರಿತು ತಿಳಿಯಬೇಕೆಂದಿರುವವರು ಮೈಸೂರಿನ 'ಪ್ರಬುದ್ಧ ಕರ್ನಾಟಕ'ದಲ್ಲಿ (ಸಂ. ೨೭, ಪಾರ್ಥಿವ ಸಂ|ದ ವಿನಾಯಕನ ಸಂಚಿಕೆ, ಪು. ೯೩) ಪ್ರಕಟವಾದ 'ಬುದ್ಧನ ಮತ್ತು ಮಹಾವೀರನ ಪರಿನಿರ್ವಾಣಗಳ ಕಾಲ' ಎಂಬ ನನ್ನ ಲೇಖವನ್ನು ನೋಡುವುದು.

ನನ್ನ ತಮ್ಮ ಚಿ| ನಾರಾಯಣನ
ಮುದ್ದು ಮಗಳಂದಿರು

ವೈ. ವಾ. ಸೌ| ದೇವಕೀ ಬಾಯಿ
(೧೯೧೫—೧೯೩೭)

ಮತ್ತು

ವೈ. ವಾ. ಕುಮಾರಿ ಮನೋರಮಾ ಬಾಯಿ
(೧೯೧೭—೧೯೪೧)

ಇವರ

ಅಮ್ಲಾನವಾದ ಅಕ್ಕರೆಯ ನೆನವಿಗೆ

ಕಣ್ಣೀರಿನ ಕಾಣಿಕೆ

ಇರುಳು ಹಗಲಿಸುವಂದು, ಹಗಲಿರುಳಿಪಂದು,
ಕಾವೆನಾನುದಿನಂ ಬಹಿರಿ ನೀವೆಂದು?

* * * * * *

ಈಗ ನೀವಿರುವಲ್ಲಿ ಕೊಳುವಿರೇನಮ್ಮ
ಈ ಕಾಣಿಕೆಯ? ನೆನವಿರೇನಲ್ಲಿ ನಮ್ಮ?

ನಮೋ ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ

ವೈಶಾಖಿ

ಅಥವಾ

ಬುದ್ಧನ ಕಡೆಯ ದಿನ

'ಆ ಸಂದ' ಏಳೆನ್ನು ಭಿಕ್ಷುಗಳನೆಚ್ಚರಿಸು.
ಪಾವೆಯಿಂ ಅಮ್ರವನದಿಂ ಕೋಳಿ ಕೂಗುವುದೆ
ಹೊರಟು "ಕುಶಿನಾರಕಾಗುವ' ಎಂದನಮಿತಾಭ.
ಆನಂದನವರನೆಬ್ಬಿಸುತೊಡನೆ ಮರಳಿ ಬರೆ,
ಭಗವಂತ ಮೆಲ್ಲನಿಂತೆಂದ—"ಕೇಳಾನಂದ,
ನಿನ್ನೆ ಕಮ್ಮಾರ ಚುಂದನ ಮನೆಯೊಳಟ್ಟ "ಸೂ
ಕರ ಮದ್ದವವನುಂಡ ಬಳಿಕ ಬಸುಗುತ್ತದಿಂ
ದಣಿಯರಂ ಬಳಲುತಿಹೆ, ಬಸಿರು ನೋನೋಯುತಿದೆ,
ಕರುಳು ಸುಲಿಸುಲಿಯುತಿದೆ. ಮದ್ದವವದಂ "ತಥಾ
ಗತರೆ ಹೊರತಾರುಮರಗಿಸರೆಂದೆ ಉಳಿದುದಂ
ಕುಳಿಯಗೆದು ಹೂಳೆಂದೆ. ಮತ್ತೆ ಕೇಳಾನಂದ,
ಇಂದು ಸಲವತ್ತಯಿದು ವರುಷ ಮುನ್ನಾನೊಮ್ಮೆ
ಸಂಬೋಧಿವಡೆದಣಮೆ ದಿನದಿ "ಸೇರಂಜರೆಯ
ತಡಿಯಣುರುವೇಲೆಯಾ ನ್ಯಗ್ರೋಧದಡಿಯಲ್ಲಿ
ಏಹರಿಸುತ್ತಿರೆ ಪಾಪಿ "ಮಾರಸಯ್ತಂದಲ್ಲಿ,
ಪರಿನಿರ್ವೃತಿಸು" ಸುಗತ," ಬದುಕಿಂದ ಭಗವಂತ
ತೊಲಗೆಂದ. ಪರಿನಿರ್ವೃತಿಸೆ ಮಾರ, ಬದುಕಿಂದ
ತೊಲಗೆಸೀ ಬ್ರಹ್ಮಚರ್ಯದ ಧರ್ಮ ಋದ್ಧಿಸದ
ಮುನ್ನ, ಜಗದೊಳಗೆ ವಿಸ್ತಾರಿಸದ ಮುನ್ನ, ಪೃಥು
ಭೂತವಾಗದ ಮುನ್ನ, ಸ್ಫೀತವಾಗದ ಮುನ್ನ,
ಮನುಜರಲಿ ಸುಪ್ರಕಾಶಿಸದ ಮುನ್ನಾಂ ಕಣಾ
ತೊಲಗೆನೆಂದವಗೆಂದೆ. ಇಂದಿಗಿದೊ ಆನಂದ
ಮೂರೆ ತಿಂಗಳ ಹಿಂದೆ "ವೈಶಾಲಿಯಲ್ಲಿಯಾ

ಚಾಪಾಲ ಚೈತ್ಯದಲ್ಲಿದ್ದಂದು ಮಾರಿಯಾ
ಪಾಪಿ ಮಾರಂ ಬಂದು, ಪರಿನಿರ್ವೃತಿಸು ಸುಗತ
ಭಗವಂತ ಬದುಕಿಂದ ತೊಲಗೆಂದ. ನಾನವಗೆ
ಸುಪಿಸೆಲವೊ ಮಾರ, ಇನ್ನಾಂ ತಳುವೆನಿಂದಿನಿಂ
ಮೂರೆ ಮಾಸದಿ ತಥಾಗತನ ಪರಿನಿರ್ವಾಣ
ವಾಗಲಿಹುದೆಂದೆ. ಮೇಣಿಂದಿನಿರುಳೆ ಹಿರಣ್ಯ
ವತಿಯಾಜೆಕರೆಯ ಕುಶಿನಾರದುಪವರ್ತನದ
ಮಲ್ಲರಾ ಸಾಲವನದಲ್ಲಿ ಪಶ್ಚಿಮ ಯಾಮ
ದೊಳಗೆ ಕಾಸಿದ ಕಾಂಚನಂ ಕೇಳನುಳಿವಂತೆ,
ಆನೆ ನುಂಗಿದ ಬೇಲದಂತೆ, ನಾಗಂ ತನ್ನ
ಹೆರೆಯುಚ್ಚುವಂತೆ, ಆನಂದ ಸುಗತಂ ಕೇಳ
ದೇಹವಂ ತೊರೆದಪಂ. ಮತ್ತೆ ಕೇಳಾನಂದ.
ಕಾದ ಕಬ್ಬಿಣಕಿತ್ತ ನೀರಂತೆ, ನಿದ್ದೆಯಂ
ತಿಳಿದವನ ಕನಸಾರುವಂತೆ, ಕಪ್ಪುರ ಸುಟ್ಟು
ಬೂದಿಲ್ಲದಂತೆ, ತನಿವಾಲ ನೊರೆಯಂತೆ ಪರಿ
ನಿರ್ವಾಣವಡೆವಂ ತಥಾಗತಂ. ಪಂಜರದ
ಸಡಲಿದ ಸಲಾಕೆಯಂತೆ ನಿಮಿತ್ತ ಮಾತ್ರವೀ
ರುಜೆಯದಕೆ. ಆನಂದ ವಯಸೆನ್ನ ಪರಿಪಕ್ವ
ವಾಯ್ತು, ನೋಡಿಂದೆ ತುಂಬಿತು ವರುಷವೆಂಬತ್ತು.
ಸಂದುದಾಯುಷ್ಯ. ಹೆಜ್ಜಿನ ಜೋಕೆಯಿಂ ತಥಾ
ಗತನ ದೇಹಂ ಹರಕು ಬಂಡಿಯೆನೆ ಕುಲುಕುತಿದೆ.
ಎಂದಿಗೆ ಗಡಾ ನಿರೋಧ ಸಮಾಧಿಯಲಿ ವಿಹರಿ
ಪನೊ ಸುಗತನವನ ದೇಹಕ್ಕೆ ನೆಮ್ಮದಿಯಂದೆ.
ಆನಂದ ಆತ್ಮದೀಪರೆ ಆತ್ಮಶರಣರೆಮ,
ಧರ್ಮದೀಪರೆ ಧರ್ಮಶರಣರೆಮ ನೀವಾಗಿ.
ಭಿಕ್ಷುಗಳೆ ಶೀಲಂ, ಸಮಾಧಿ, ಪ್ರಜ್ಞೆ, ವಿಮುಕ್ತಿ
ಈ ಚತುರ್ಧರ್ಮದನುಬೋಧಿಯಾಗುವುದೆ ಭವ
ಭವಕೆ ನೀಸುತಲಿರುವ ಭವತೃಷ್ಣೆಯುಚ್ಛಿನ್ನ
ವಾಗಿ ಬಳಿಯಂ ಪುನರ್ಭವವಿಲ್ಲ. ಕೇಳಿರೈ
ವ್ಯಯಧರ್ಮವೆಲ್ಲ ಸಂಸ್ಕಾರವದರಿಂ ನಾವ

ಘಾಸಿಸಿರಿ. ಇಂದೆ ನಿಮ್ಮಿಂದಗಲಿ ಪೋಪೆ. ನೀ
ವಪ್ರಮತ್ತರೆ, ಜಾಗ್ರತರೆ, ಸುಶೀಲರೆ, ಸಮಾ ೫೫
ಹಿತರೆ ಆಗಿರಿ. ಚಿತ್ತವಂ ದಮಿಸಿಕೊಳಿರಿ. ಯಾ
ವಾತನೀ ಉಪದೇಶವಂ ತಪ್ಪದಿಂತು ಕೆ
ಯ್ಕೊಳುವನಾತಂ ಸಂಸೃತಿಯ ತೇರಿ ದುಃಖವಂ
ಕೊನೆಗೊಳಿಸುವಂ. ಕೇಳಿರಿದೊ ಕೋಳಿ ಕೂಗುತಿದೆ.
ಆನಂದ ಇನ್ನು ತಡೆಯದೆ ನಡೆವ ಕುಶಿನರಕೆ.'— ೬೦
ಇಂತೆಂದು ಧೀರನಾ ೩ಗೌತಮಂ ಪ್ರಬಲಿಸುವ
ಮರಣಾಂತ ವೇದನೆಯ ಸೊಲ್ಲನೆತ್ತದೆ ಸೋಸಿ,
ಪಾವೆಯಂ ಕೊನೆಗೊಮ್ಮೆ ೩ನಾಗಾವಲೋಕಿಸುತ,
ದೂಳಿಲ್ಲ ಕೆಸರಿಲ್ಲದಂತಿರುಳ ಮಳೆ ತೊಳೆದ
ದಾರಿಯಂ ಮೆಲ್ನಡೆದು ಭಿಕ್ಷುಸಂಘಂ ಬೆರಸು, ೬೫
ಪರಿಧಿಯನ್ನೊಡಗೂಡಿ ನಡೆಯುವುಡುವೊಡೆಯನೆನೆ,
ಸಾರ್ಥಮಂಡಲದಗ್ರಸರ ಸಾರ್ಥವಾಹನೆನೆ,
ಪಾವೆಯಿಂದೆದ್ದು ಕುಶಿನರದ ಬಳಿವಿಡಿದಂ.

ಇದೊ ನೋಡ ಶುಭ್ರ ಗಗನದ ಪಡು ದಿಗಂತದೇ
ಕಾಂತದಲಿ ಮಿಳ್ಮಿಳನೆ ಮಿಟುಕೆ ಸುತ್ತಣ ತಾರೆ ೭೦
ಗಳ ಬಳಗವಸ್ತಮಿಪ ಪೂರ್ಣಚಂದ್ರಂ ತಥಾ
ಗತನ ಪರಿನಿರ್ವಾಣ ನಾಟಕವನೊಂದಿನಕೆ
ಮುನ್ನೆ ನಟಿಸುವನೇನೊ! ಮೆಲ್ಲನಿಗೊ ತೀಡುತಿದೆ
ತಂಗಾಳಿ, ಹೂಗಾಳಿ. ಉಲಿಯುತಿದೆ ಒಂದೊಂದೆ
ಹಕ್ಕಿ. ರೀರೀಕರಿಸುತಿದೆ ಝಿಲ್ಲಿ. ತೊಗಲಕ್ಕಿ ೭೫
ಹಾರುತಿದೆ ಮರದೆಡೆಗೆ. ಹಾಳುಬೀಳಿನ ಬಳಿಗೆ
ಸೇರುತಿದೆ ಗೂಗೆ. ಹಳೆಯಟ್ಟಗಳ ಕಂಡಿಯಂ
ತೂರುತಿದೆ ಮಟಬೆಕ್ಕು. ತುಡುಗುಂಡು ನರಿವಿಂಡು
ನುಗ್ಗುತಿದೆ ಹೊದರೊಳಗೆ. ನೀರ್ಗಳಲಿ ಗೊಡರುತಿದೆ
ಕಪ್ಪೆ. ನಾಯಿಗಳೆದ್ದು ಮೆಯ್ಮುರಿದು ಕಿವಿಗೊಡಹಿ ೮೦
ಬೊಗಳುತಿವೆ. ಮೆಲ್ಲಮೆಲ್ಲನೆ ರೆಂಬೆ ಬೀಕುತಿವೆ.
ಒಂದೆರಡು ಮೂರು ಮೇಣಂತಂತೆ ಮಿಗುಮಿಗುತ

ಮನೆಬೆಳಕು ಮಿಣುಕುತಿವೆ. ಅಲ್ಲಲ್ಲಿ ಮನೆಯಲ್ಲಿ
ಕುವಿಯುತಿದೆ ಮೊಲೆಗೂಸು. ಮರಳಿ ಕೂಗಿತು ಕೋಳಿ.
ಅರುಣಿಸಿತು ಮೂಡ ದೆಸೆ. ಬಗೆಬಗೆಯ ವಿಹಗಗಳ
ಮೇಳವಂ ಪಾಡುತಿದೆ. ಕಾಕಾರವಂ ಸುತ್ತ
ಲಲ್ಲಲ್ಲಿ ಕರೆಯುತಿದೆ. ತೊರೆಯ ತಡಿಗಾದಪುದು
ನೀರ್ವಕ್ಕಿಗಳ ಕೇಳಿ.೧೪ ಮನೆಗಳಲ್ಲಲ್ಲಿಂದ
ಹೊಗೆ ತೆಳ್ಳನೇಳುತಿದೆ. ಒಕ್ಕಲಿಗನೆತ್ತುಗಳ
ನಟ್ಟಿ ಹೊಲದಾಗೆ, ಮುಡಿವಳೆನರುವೆ ಮೂಟೆಯಂ
ಕಟ್ಟಿ, ಬಲೆಯಂ ಹೊತ್ತು ಧೀವರಂ ಹೊಳೆಯಾಗೆ
ನಡೆದಪಂ. ಕಿರ್ರೆಂದು ತಿರುಗಲಾಯಿತು ಗಾಣ.
ಕಮ್ಮಾರಸಾಲೆಯಲಿ ಭುಗುಭುಗಿಸುತಿದೆ ಬೆಂಕಿ.
ಅದನೆಲ್ಲ ಕಂಡು ಕಾಣದೆ ಭಿಕ್ಷು ಸಂಘಮೊಡ
ಗೂಡುತ ತಥಾಗತಂ ಮೆಲ್ಲಮೆಲ್ಲನೆ ಕಾಲ
ನಿಡುತ ಹಾದಿಯಿಸತ್ತಣೊಂದು ಮರದಡಿಗಯ್ದಿ
ಇಂತೆಂದ—'ಆನಂದ ದಣಿದಿರುವೆ, ನಾಲ್ಕಡಿಸಿ
ಹಾಸು ಕಂಥೆಯ, ಕುಳಿತು ದಣುವನಾರಿಸುವೆ.'

ಆನಂದನಂತೆ ಕಂಥೆಯ ಹಾಸೆ ಕುಳಿತಲ್ಲಿ
ಮರಳಿ ಇಂತೆಂದ—'ಆನಂದ ಬಾಯಾರುತಿದೆ,
ಕೊಂಚ ನೀರಂ ತಾರ, ಕುಡಿವೆ ನಾನಾನಂದ.'
ಆನಂದನಾಗ, 'ಭಗವಂತ ಈ ದಾರಿಯಿಂ
ದೀಗ ಹೋದಯ್ನೂರು ಬಂಡಿಗಳ ಗಾಲಿಯಿಂ
ಕದಡಿ ಕೆಸರಾದ ತೊರೆಯಿಹಾ ನೀರಪಾನೀಯ.
ಇಲ್ಲೆ ಒಳೆಯಣ ೧೫ಕಕುತ್ಥಾನದಿಯು ನೀರೆಸಿತೊ
ಶೀತಲಂ ನಿರ್ಮಲಂ ಮಧುರಮಾ ನದಿಗಯ್ದಿ
ನೀರ್ಕುಡಿದು ಮೆಯ್ತೊಳೆದು ಕೊಳುವೆ' ಎನೆ, ಮತ್ತೊಮ್ಮೆ
ಸುಗತನಿಂತೆಂದ—'ಆನಂದ ಬಾಯಾರುತಿದೆ.
ಕೊಂಚ ನೀರಂ ತಾರ, ಕುಡಿವೆ ನಾನಾನಂದ.'
ಆನಂದನಂತೆ ಉತ್ತರವಿತ್ತ. ಬಳಿಕೊಮ್ಮೆ
ಬುದ್ಧನಿಂತೆಂದ—'ಬಾಯಾರುತಿದೆ ಆನಂದ,

ಕೊಂಚ ನೀರಂ ತಾರ, ಕುಡಿವೆ ನಾನಾನಂದ.'
ಮೂರನೆಯ ಬಾರಿ ಅಂತೆಂಬುದೆ ತಥಾಗತಂ
ತಟ್ಟನೆ ತಥಾಸ್ತು ಎಂದಾನಂದ ಪಾತ್ರವ
ನ್ನೆತ್ತಿ ತೊರೆಗಯ್ದಿದಂ. ಬಂಡಿಗಳ ಗಾಲಿಯಿಂ
ವೀಗ ತಾಂ ಕದಡಿ ಕೆಸರಾದ ನೀರನಿತರೊಳೆ,
ಕಿಲುಬಿಡಿದ ಕನ್ನಡಿಗೆ ಹುಳಿಹಿಡಿಸೆ ಹೊಳೆವಂತೆ,
ವಿಸ್ಮರಿಸೆ ದುಃಸ್ವಪ್ನವೆಚ್ಚರಂ ತಿಳಿವಂತೆ,
ಗಾಳಿ ಮೋಡವ ಸೋಹೆ ಬೆಳ್ದ ಚಂದ್ರಿಕೆಯಂತೆ
ವಿನಿತಚ್ಛವೆನಿತನಾವಿಲವಾಗೆ ಕಂಡು ನಿ
ಚ್ಚೈರಗಾಗಿ, ಆತನಮಮೇನಚ್ಚರಿಯೊ ತಥಾ
ಗತನಾ ಮಹರ್ದ್ಧಿಕತೆ! ಏನದ್ಭುತವೊ ಅಮಮ
ಸುಗತನ ಮಹಾನುಭಾವತೆ! ಎಂದು ಕೊಂಡಾಡಿ,
ನೀರು ತುಂಬಿಸಿ ತಂದ ಪಾತ್ರವ ತಥಾಗತಂ
ಗಿತ್ತು, 'ಭಗವಂತ ಅಮಮೇನಚ್ಚರಿಯೊ ತಥಾ
ಗತನಾ ಮಹರ್ದ್ಧಿಕತೆ! ಏನದ್ಭುತವೊ ಅಮಮ
ಸುಗತನ ಮಹಾನುಭಾವತೆ! ಬಂಡಿಗಳ ಗಾಲಿ
ಯಿಂದೀಗ ಕದಡಿ ಕೆಸರಾದ ನೀರನಿತರೊಳೆ
ವಿನಿತಚ್ಛವೆನಿತನಾವಿಲ! ಕುಡಿಯ ಭಗವಂತ'
ವನಲು ಬುದ್ಧಂ ಪಾತ್ರವಿಸಕೊಂಡು ನೀರ್ಕುಡಿದು
ಸಂಬಾಳಿಸುತ್ತ ಕಣ್ಮಗಿದು ಪದ್ಮಾಸನದಿ,
ಡಿಂಡೀರ ಪಿಂಡದಿ ಮರಾಲ ಮಂಡಿಸಿದಂತೆ.
ತೆರೆದ ರೆಪ್ಪೆಯಲಿ ಕಣ್ಣಿನ ಗೊಂಬೆ ನೆಲತಂತೆ,
ಕುಳಿತಿರಲು ಮೂಡಣದಿ ತಣ್ಮಗಿಲ ಮರೆಗೆ ಪೈ
ಠಾಮ ಪೂರ್ಣಿಮೆಯ ಮಾರ್ತಂಡನುದಯಿಸಿದಂ.

ಬಾರೆನ್ನ ಮನಸೆ ನೋಡಲ್ಲಿ ಮರದಡಿಯಲ್ಲಿ
ಕುಳಿತಿಹ ತಥಾಗತನ! ನಸುಕಿನಲಿ ನಸುಮುನ್ನ
ಮಸುಕಿದಾ ಸುಗತನನ್ನೀಗ ನೆಟ್ಟನೆ ನೋಡ!
ಪರುಷವೆಂಬತ್ತಂತೆ, ಇಂದೆ ತುಂಬಿತ್ತಂತೆ' —
ತೊಗಲಿಸಿತು ಸಡಲಿಲ್ಲ, ನವಿರಸಿತು ನರೆತಿಲ್ಲ,

ದನಿಯಣಂ ಕುಗ್ಗಿಲ್ಲ, ಹುರಿಯಣಂ ಬಗ್ಗಿಲ್ಲ,
ಕಣ್ಣಾಲಿ ಬೆಳತಿಲ್ಲ, ಹಲ್ಲೊಂದು ಮುದುರಿಲ್ಲ.
ನೋಡ ನಂದ್ಯಾವರ್ತ ತರುವಂತೆ ಮಧ್ಯವೋ
ನ್ನತನ ಜಂಬೂಫಲದ ಧವಲ ದೇಹಚ್ಛವಿಯ!
ಶೈವಲಾಚ್ಛನ್ನ ಕಾಸಾರದಂತಾನನಂ
ನೋಡೆನಿತು ಗಂಭೀರ! ನೋಡ ಮೋಡದ ಮರೆಯ
ಮಿಂಚಂತೆ ದೃಗ್ವಿಷಯದಾಚೆ ನಿಟ್ಟಿಪ ಮುಕುಲ
ನೇತ್ರವಂ! ಕರ್ಣಗಳೊ ಎನಿತೊ ಪ್ರಶ್ನೆಗಳೊಗುವ
ಆನೆಬಾಗಿಲೊ ನೋಡ! ನಾಸಿಕವೊ ಮಾರನಂ
ಸೋವ ಕಹಳೆಯೊ ನೋಡ! ಬಾಯೊ ವಾಗ್ಜಾಹ್ನವಿಯ
ನಂತ ಕಾಲದೆ ಹುಯ್ವ ಸಾಗರದ್ವಾರವದೊ
ನೋಡ! ನೋಡ ವಿಶಾಲ ವಕ್ಷವೊ ವಿಭಾತದಾ
ಪಾಟಲಾಭ್ರವೊ! ನೋಡ ಸ್ಯಗ್ರೋಧ ಶಿಫೆಯೊ ಆ
ಜಾನುಬಾಹುವೊ! ನೋಡ ವಿಪುಲಾಂಕವೊ ಕಕುತ್ಕ
ಯಂತರೀಪವೊ! ನಿಶೀಥದ ಶಶಾಂಕಾತಪವೊ
ಬ್ರಹ್ಮಚರ್ಯದ ಶೀತಲೋಜಸ್ವಿತೆಯೊ ನೋಡ!
ಕಣ್ತಣಿಯೆ ನೋಡ, ಕಣ್ಗಡಿದು ನೋಡಿಂದೆ ಈ
ಜ್ಞಾನದೀ ಧ್ಯಾನದೀ ಶಾಂತಿಯಿಂ ಕಾಂತಿಯಿಂ
ಅರ್ಹಂತವೀ ಧರ್ಮ ವಿನಯ ವಿದ್ಯಾಚರಣ
ಸಂಪನ್ನವೀ ಅನುತ್ತರವೀ ಪುರುಷದಮ್ಯ
ಸಾರಥಿಕವೀ ಸುಗತವೀ ದೇವಮಾನುಷ್ಯ
ಶಾಸ್ತೃವೀ ಸಂಬುದ್ಧವೀ ಲೋಕವೇತ್ತೃವೀ
ಭಗವಂತವೀ[೬] ದಯೈಕಾಲೋಕವೀ ಅಪರ
ಭಾನುವಾಳ್ದಪನು ನಿಬ್ಬಯಲೊಳಗೆ ನೋಡ!

ಆಗಳೆದೊ ಕುಶಿನಾರದಿಂದ ಪಾವೆಗೆ ಪೋಪ
ಪುಕ್ಕುಸಂ ಮಲ್ಲನೊರುವಂ ಮರದ ಕೆಳಗಲ್ಲಿ
ಕುಳಿತ ಭಗವಂತನಂ ಕಂಡು ವಂದಿಸಿ ಕೆಲದೆ
ಮುಂಡಿಸುತ, 'ಭಗವಂತನಿಲ್ಲಿರುವನೆಂದರಿತು
ಬಂಡಿಗಳ ಮುಂದಟ್ಟಿ ಕಾಂಪೆನೆಂದಿಲ್ಲಿಗಾ

ಸಯ್ತುಂದೆ. ಸಕಲ ದೇವತೆಗಳುಂ ಮನುಜರುಂ
ಸುಖವಸಿಚ್ಛಿಸಿ ಮಂಗಲದ ಕಲ್ಪನೆಯ ಮಾಡು
ತಿಹರ್ಕೆಸೆ? ಅದರೊಳುತ್ತಮವಾವ ಮಂಗಲಂ?
ಪೇಳ ಭಗವಂತ' ಎನೆ, ಭಗವಂತನಿಂತೆಂದ — ೧೭೦
·ಕೇಳ ಪುಕ್ಕುಸ, ಮೂರ್ಖರೊಡನಾಟವಂ ತ್ಯಜಿಸಿ,
ಪಂಡಿತರ ಸೇರೆ, ಪೂಜಿಸೆ ಪೂಜ್ಯರನ್ನದುವೆ
ಉತ್ತಮಂ ಮಂಗಲಂ. ಯೋಗ್ಯದೇಶದಿ ನೆಲಸೆ, ೧೭೫
ಗಳಿಸಿದಾ ಪುಣ್ಯಮೊಡನಿರೆ, ಮನವ ಸನ್ಮಾರ್ಗ
ದಲಿ ನಿಲಿಸಲದೆ ಕಣಾ ಉತ್ತಮಂ ಮಂಗಲಂ.
ವಿದ್ಯೆಯಂ ಶಿಲ್ಪವಂ ವಿನಯವಂ ಕಲಿಯೆ, ಸ
ಚ್ಛರ್ತನದಿ ನಡೆಯೆ, ಸಮಯೋಚಿತಂ ಭಾಷಣಂ ೧೮೦
ಮಾಡಲದೆ ಉತ್ತಮಂ ಮಂಗಲಂ. ತಾಯ್ತಂದೆ
ಯರ ಸೇವಿಸುತ್ತಲಿರೆ, ಮಡದಿಯಂ ಮಕ್ಕಳಂ
ಒಳಗಮಂ ದಾನದಿಂ ಪ್ರಿಯವಚನದಿಂದರ್ಥ
ಚರ್ಯೆಯಿಂ ಸಮಭಾವದಿಂ ಸಂಗ್ರಹಿಸೆ, ವ್ಯವ ೧೮೫
ಸ್ಥಿತಮಾಗಿ ಕಾರ್ಯಮಂ ಗೆಯ್ಯಲದೆ ಉತ್ತಮಂ
ಮಂಗಲಂ. ಬೇಡುವವರಿಗೆ ನೀಡೆ, ಧರ್ಮವ
ನ್ಮಾಚರಿಸೆ, ಪಾಪದಿಂ ತೀರ ವಿರಮಿಸೆ, ಮದ್ಯ
ಪಾನದಿಂ ಸಂಯಮಿಸೆ, ಧರ್ಮಕಾರ್ಯದೊಳೆಡಹ
ದನವದ್ಯ ಕರ್ಮವನ್ನೆಸಗಲದೆ ಉತ್ತಮಂ
ಮಂಗಲಂ. ಗೌರವವೆ, ಸಂತುಷ್ಟಿಯೆ, ವಿನಮ್ರ ೧೯೦
ಭಾವವೆ, ಕೃತಜ್ಞತೆಯೆ, ಅಂದಂದು ಧರ್ಮದಾ
ಕರ್ಣನವೆ, ಕೇಳದುವೆ ಉತ್ತಮಂ ಮಂಗಲಂ.
ಕ್ಷಮೆಯೆ, ಮೃದುಭಾಷಿತವೆ, ಶ್ರಮಣರ ಸಮಾಗಮವೆ.
ಅಂದಂದು ಧರ್ಮಸಂಕಥೆಯೆ, ಅದೆ ಉತ್ತಮಂ
ಮಂಗಲಂ. ಬ್ರಹ್ಮಚರ್ಯವೆ, ತಪಸ್ವಿತೆಯೆ, ಚತು ೧೯೫
ರಾರ್ಯ ಸತ್ಯಗಳ[illegible] ದರ್ಶನವೆ, ನಿರ್ವಾಣದಪ
ರೋಕ್ಷಾನುಭವವೆ,[illegible] ಅದೆ ಉತ್ತಮಂ ಮಂಗಲಂ.
ನಿಂದಾಸ್ತವಂ, ಯಶೋಽಪಯಶ, ಸುಖದುಃಖ, ಲಾ
ಭಾಲಾಭಮೀ ಎಂಟು ಲೋಕಧರ್ಮದಿ ಸಿಲುಕಿ

ದೊಡವುಣಂ ಕಂಪಿಸದೆ ಶೋಕರಹಿತಂ ಸುಖಿಂ
ವಿರಜಮಿರೆ ಚಿತ್ತವದೆ ಉತ್ತಮಂ ಮಂಗಲಂ.
ಮಂಗಲವಿವನ್ನಾಚರಿಸುತ ಸರ್ವತ್ರಾಪ
ರಾಜಿತಂ ಯಾವವಂ ಸ್ವಸ್ತಿಸುಖವಡೆದಪನೊ
ಅದೆ ಅತನುತ್ತಮಂ ಮಂಗಲಂ ತಿಳಿಯಾ!'

ಮಲ್ಲನಾ ದಿವ್ಯವಾಣಿಯನಾಲಿಸಿಂತೆಂದ— ೨೦೫
'ಭಗವಂತ, ಬರಿಯ ಕಣಜದಿ ಗೋಣಿ ದವಸವಂ
ಸುರಿವಂತೆ, ಬಿಟ್ಟ ಬಂಡಿಗೆ ಎತ್ತುಗಳ ಹೂಡ
ಲೆಳೆವಂತೆ, ಬರಿಗೆಯ್ಯ ಬಣಜಿಗಗೆ ಬಂಡವಳ
ವೆರೆದಂತೆ, ಪಾಂಥಗಿರುಳಲಿ ಸತ್ರ ತೋರ್ದಂತೆ,
ಕೃತಕೃತ್ಯನಾದೆನುತ್ತಮ ಮಂಗಲಂಗಳೇ ೨೧೦
ಜೋಧೆಯಿಂದಿನ್ನು ಭಗವಂತನಿಗೆ ಶರಣೆಂಬೆ,
ಧರ್ಮಕಾಂ ಶರಣೆಂಬೆ, ಸಂಘಕಾಂ ಶರಣೆಂಬೆ.
ಭಗವಂತನಿನ್ನೊಪ್ಪಿ ಕೊಳುಗೆನ್ನ ತನ್ನುಪಾ
ಸಕನಾಗಿ. ಭಗವಂತ, ಇದೊ ಸ್ವರ್ಣವರ್ಣದೀ
ಪರಿಧಾನ ಯುಗಳ, ಹೊದಕೊಂಡಿದನ್ನೆನ್ನಲ್ಲಿ ೨೧೫
ದಯದೊರು.' ಭಗವಂತನಂತಾಗೆ ಒಂದೆನಗೆ
ಒಂದನಾನಂದನಿಗೆ ಹೊದಿಸೆಂದನಂತಾಗ
ಲೆಂದು ಪುಕ್ಕುಸನಾಗ ಭಗವಂತಗೊಂದು ಮೋ
ಣಾನಂದಗಿನ್ನೊಂದು ಹೊದಿಸಿ, ಸಂಜೆಯ ಹೊನ್ನ
ಹೊದೆದ ಭಾಸ್ಕರನಂತೆ, ಹಣ್ಣೆಲೆಯೊಳಶ್ವತ್ಥ ೨೨೦
ದಂತೆ, ಮುಂಗಾರಿನುಬ್ಬರದಿಂದ ಹೊಂಗಲೆತ
ದೇವನಿರ್ಝರಿಣಿಯಂತೆಸೆವ ಬುದ್ಧಂಗೆರಗಿ
ಬಲವಂದು ತೆರಳೆ, ಭಗವಂತನಿಗೆ ಹೊದಿಸಿದಾ
ಹೊಂಬಟ್ಟೆ, ಸಂಧ್ಯಾರುಣಂ ಕೌಮುದಿಸುವಂತೆ,
ಪಾರದಂ ತಗುಳ್ದ ಹೊನ್ನಂತೆ, ಹೊಟ್ಟುಡುಗದಾ ೨೨೫
ನೆಲ್ಲಂತೆ ಕಳೆಗುಂದೆ, ಅನಂದ ಕಂಡಿದೇ
ನಚ್ಚರಿಯ! ಏನದ್ಭುತಂ! ತಥಾಗತನ ಮೆ
ಯ್ವೆಣ್ಣವೆನಿತವದಾತ! ಎನಿತು ಪರಿಶುದ್ಧ ಮೀ

ಹೊಂಬಟ್ಟಿ ತೊಡಿಸುವೊಡನೆಂತು ಕಳೆಗುಂದಿತೆನೆ,
ಭಗವಂತನಿಂತೆಂದ—'ಅಂತೆಯೆ ಕಣಾನಂದ,
ಅವತ್ತಿಗೊಮ್ಮೆ "ಸಂಬೋಧಿವಡೆದಂದು ಮೇ
ಣೀವತ್ತಿಗೊಮ್ಮೆ "ನಿರುಪಧಿಶೇಷ ನಿರ್ವಾಣ
ವಡೆವಂದು ಕೇಳ್ತಥಾಗತನ ಮೆಯ್ವಣ್ಣಂ
ತೆರಡು ಸೂಳಾನಂದ ಅವದಾತವಾಗುತಿದೆ,
ಪರಿಶುದ್ಧವಾಗುತಿದೆ.'
ಅಂತೆಂದು ಭಿಕ್ಷುಗಳ
ನೊಡಗೂಡಿ ಬುದ್ಧಂ ಕಕುತ್ಥಾನದಿಯನಯ್ದಿ
ನೀರಿಳಿದು ಮಿಂದು ನೀರ್ಕುಡಿದು ಮೇಲಕೆ ಬಂದು
ಕೆಲಕಾಗಿ ಆಮ್ರವನವೊಕ್ಕು ಚುಂದನಿಗೆಂದ—
'ಚುಂದ ನಾಲ್ವಡಿಸಿ ಕಂಥೆಯ ಹಾಸು, ದಣಿದಿರುವೆ
ನೊರಗಿದಪೆ.' ಚುಂದನಂತೆಯೆ ಕಂಥೆ ಹಾಸೆ, ಗೌ
ತಮನಾಗ "ಸಿಂಹಶಯ್ಯೆಯಲಿ ಕಾಲಿನ ಮೇಲೆ
ಕಾಲಿಕ್ಕಿ ಬಲವಂಕದಲಿ ಮಲಗಿ, ತನ್ನ ಮುಂ
ದಿಹ ಚುಂದನನ್ನೋಡಿ ಭಿಕ್ಷುಗಳಿಗಿಂತೆಂದ—
'ದೂರದಿರಿ ಮೇಣ್ಮಾರುಗಲೀಯದಿರಿ ಚುಂದನ
ನ್ನವನ ಸೂಕರಮದ್ದವಂ ತಥಾಗತಗಿಂತು
ಕೊನೆಯ ಕೂಳಾಯ್ತೆಂದು, ಮೃಗವನಿಕ್ಕುವ ಶಬರ
ನಂಬುವಂ ಜರೆಯದಿರಿ, ಬೇಸಗೆಗೆ ಕೊಳ ಬತ್ತೆ
ಶಫರಿಯಂ ಶಪಿಸದಿರಿ, ಜರಠ ಶಕಟಂ ಕುಸಿಯೆ
ಹೋರಿಯಂ ಹಳಿಯದಿರಿ. ಕೇಳಿರೈ ಭಿಕ್ಷುಗಳೆ,
ಯಾವ ಪಿಂಡವನುಂಡವನೆ ತಥಾಗತನನು
ತ್ತರದ ಸಂಬೋಧಿಯಂ ಪಡೆದಪನೊ, ಮೇಣಾವ
ಪಿಂಡವನ್ನುಂಡವನೆ ಸುಗತ ನಿರುಪಧಿಶೇಷ
ನಿರ್ವಾಣವಡೆದಪನೊ, ಅರಿಯಿರೈ ಆ "ಪಿಂಡ
ಪಾತದ್ವಯಂ ಪಿಂಡಪಾತಾಂತರದಿನೆನಿತೊ
ಆಯುಷ್ಕರಂ, ಯಶಸ್ಕರತರಂ, ಸುಖಕರಂ,
ಸ್ವರ್ಗಂಕರಂ, ಮಹಾಫಲತರಂ!' ಮತ್ತೆ ಗೌ
ತಮನಿಂತುದಾನಿಸಿದ "—'ಹೆಚ್ಚುತಿದೆ ಕೊಡುವವನ

ಪುಣ್ಯ ಮೇಣ್ಸಂಯಮಿಯ ವೈರವಿಸಿಸುಂ ಬಾಳ
ದೊಳ್ಳಿದಂ ಪಾಪವೆಲ್ಲವನುಳಿದಪಂ, ದ್ವೇಷ
ರಾಗ ಮೋಹಂ ಕ್ಷಯಿಸೆ ನಿರ್ವಾಣವಡೆವಂ.' ೨೬೦

ಅಸಿತರೊಳು ಭಾಸ್ಕರಂ ನಡುಪಡುವಣಾಕಾಶ
ಕಿಳಿಯೆ, ಬಿಸಿಲಿನ ಬೇಗೆ ತವೆಯೆ, ಜುಂಯ್ಯನೆ ಗಾಳಿ
ಬೀಸೆ, ಮಧ್ಯಾಹ್ನ ಮಲ್ಲಿಗೆಯರಳೆ, ತುರುಮುಂದೆ
ಮೇಹುಗಾಡಿಂದ ಝಣಝಣಿಸಿ ಮನೆಮರಳುತಿರೆ,
ಬಿಸಿಲ ಝಳಕೆಲೆಯ ಮರೆಗಾದ ಕಿರುವಕ್ಕಿ ಹೊರ ೨೬೫
ಹೊಮ್ಮಿ ಚಿಲಿಮಿಲಿಸುತಿರೆ, ಹದ್ದು ಮಂಡಲಿಸುತಿರೆ,
ಮರಗಳಲಿ ಕೋಗಿಲೆ ಕುಹೂಕುಹೂಕರಿಸುತಿರೆ,
ಕಃ ಕಃ ಎನುತ್ತ ಕೆಂಬೋತ ಪೃಚ್ಛಿಸುತಲಿರೆ,
ಕಾಡಕ್ಕಿ ಕುಟುಕಿ ಗಿಳಿವಿಂಡು ಹಿಂದೆರಳುತಿರೆ,
ಮಿಂಚುಳ್ಳಿ ನೀರಿಳಿಯೆ, ಸೂರ್ಗಳಲಿ ಸಸಿನಿದ್ದ ೨೭೦
ವಾರಿವಂ ಗುಬ್ಬಳಿಸೆ, ಕೊರಳನೊಲಿಸುತ ನವಿಲು
ಹೂಲದ ಒಳಿ ಕೆದಕಾಡೆ, ಮರದೊಳಳಿಲೋಲಾಡೆ,
ಕುರಿಯಾಡು ಮರದಡಿಯೊಳುದುರೆಲೆಯ ಜಗಿದಾಡೆ,
ಕೋತಿ ಕಿಚಿಕಿಚಿಸಿ ಜಗ್ಗಿಸಿ ಮರವ ಜಿಗಿದಾಡೆ,
ನೀರೆಡೆಯ ಗರುಕೆಯಲಿ ಗುಂಪೆರಳೆ ಸುಳಿದಾಡೆ, ೨೭೫
ಅಗಸನೊಣಬಟ್ಟೆಗಳ ಕಟ್ಟಿ ಮನೆಯಾಗೆ, ಬೆಸ
ದಂ ಗಾಳಗೊಂಡು ಮಡುವಾಗೆ, ಎಣ್ಣೆಯ ಕೊಡವ
ನೆತ್ತಿ ಗಾಣಿಗತಿ ಅಂಗಡಿಯಾಗೆ ನಡೆಯೆ, ಅಂ
ಗಡಿಬೀದಿಯಲಿ ಕೊಡುವ ಕೊಳುವ ಗೊಂದಲವಾಗೆ,
ದಾರಿಯಲಿ ಬರುವ ಹೋಗುವ ದಾರಿಗರ ಹೆಜ್ಜೆ ೨೮೦
ಯಾಗಲಿದೊ ಬುದ್ಧನಲ್ಲಿಂದಲೆದ್ದು ಹಿರಣ್ಯ
ವತಿಯಾಚೆಕರೆಯ ಕುಶಿನಾರದುಪವರ್ತನದ
ಮಲ್ಲರಾ ಸಾಲವನವಂ ಭಿಕ್ಷು ಸಂಘದೊಡ
ನಯ್ದಿ, ಆನಂದ ಉತ್ತರಶೀರ್ಷವಾಗಿ ಈ
ಯಮಳ ಸಾಲದ ನಡುವೆ ಮಂಚನಂ ಹಾಸು, ನಾ ೨೮೫
ದಣಿದಿರುವೆನಾನಂದ, ಮಲಗಿದಪೆ ನಾನೆಂದ.

ಆನಂದನಂತೆ ಹಾಸುವುದೆ ಕಾಲಿನ ಮೇಲೆ
ಕಾಲಿಕ್ಕಿ ಗೌತಮಂ ಸಿಂಹಶಯ್ಯೆಯಲಿ ಒಲ
ವಂಕದಲಿ ಮಲಗಲಾ ಯಮಕಸಾಲಮಕಾಲ
ಪುಷ್ಪಿತಂ ಪುಷ್ಪವೃಷ್ಟಿಯ ತಥಾಗತನಲ್ಲಿ
ಕರೆದು ಪೂಜಿಸೆ, ದಿವ್ಯ ಮಂದಾರಸುಮವಂತ
ರಿಕ್ಷದಿಂದಾತನಲಿ ಸುರಿದು ಪೂಜಿಸೆ, ದಿವ್ಯ
ಚೂರ್ಣಚಂದನವಂಬರದಿನೆರಚಿ ಅವನ ಮೆ
ಯ್ತಾಡಿ ಪೂಜಿಸೆ, ದಿವ್ಯ ತೂರ್ಯವಾಕಾಶದಲಿ
ಮೊಳಗಿ ಪೂಜಿಸೆ, ದಿವ್ಯ ಸಂಗೀತ ಗಗನವಂ
ತೀವಿ ಕೇಳಿಸಿ ತಥಾಗತನ ಪೂಜಿಸಲದ
ನ್ನಾರಯ್ದು ಸುಗತನಿಂತೆಂದ – 'ಕೇಳಾನಂದ,
ಈ ಯಮಕಸಾಲದೀ ದಿವ್ಯ ಮಂದಾರದೀ
ಹೂಮಳೆಯೊ, ಈ ದಿವ್ಯ ಚಂದನದ ಸಿಡಿಮಳೆಯೊ,
ಈ ದಿವ್ಯ ತೂರ್ಯಸ್ವರವೊ, ದಿವ್ಯ ಗಾಯನವೊ,
ಇವುಗಳಿಂ ಸುಗತನಿದೊ ಸತ್ಕೃತಂ, ಗುರುಕೃತಂ,
ಮಾನಿತಂ, ಪೂಜಿತಂ ತಾನಲ್ಲ! ಆನಂದ
ಯಾವ ಭಿಕ್ಷುವೊ ಭಿಕ್ಷುಕಿಯೊ ಮೇಣುಪಾಸಕನೊ
ಮೇಣಾವುಪಾಸಿಕೆಯೊ ಧರ್ಮಾನುಧರ್ಮವಂ
ಪ್ರತಿಪಾದಿಪಂ, ಸಮೀಚೀನನಹನನುಧರ್ಮ
ಚಾರಿಯಹನವರಿಂ ತಥಾಗತಂ ಸತ್ಕೃತಂ,
ಗುರುಕೃತಂ, ಮಾನಿತಂ, ಪರಮ ಪರಿಪೂಜಿತಂ
ತಾನಹಂ. ಕೇಳದರಿನಾನಂದ ನೀವೆಲ್ಲ
ಧರ್ಮಾನುಧರ್ಮವಂ ಪ್ರತಿಪಾದಿಸಿರಿ! ಸಮೀ
ಚೀನರಂತನುಧರ್ಮಚಾರಿಯಾಗಿರಿ! ಮತ್ತೆ
ಲೋಕಕಿಂತೆಯೆ ಕಣಾ ಕಲಿಸಿರಾನಂದ!'

ಆನಂದನಾಗ 'ಭಗವಂತ, ಚಾತುರ್ಮಾಸ್ಯ
ಕಳೆವುದೆ ತಥಾಗತನ ದರ್ಶನಕೆ ಬರುತಿದ್ದ
ಭಿಕ್ಷುಗಳನಿನ್ನೆಗಂ ಕಾಣುತಿದ್ದೆಮಗಕಟ
ಭಗವಂತನತ್ಯಯಿಸಲಾ ಲಾಭವೆಲ್ಲಿ?' ಎನೆ,

ಭಗವಂತನದಕೆಂದ—'ಆನಂದ, ಭಿಕ್ಷುಗಳ
ಕಂಡಲ್ಲ, ಶ್ರದ್ಧಾಳುವೆಲ್ಲಿದೊ ತಥಾಗತಂ
ಜನಿಸಿದನೊ, ತಾನೆಲ್ಲಿ ಸಂಬೋಧಿ ಹೊಂದಿದನೊ.
ಮೊದಲೆಲ್ಲಿ ಧರ್ಮಚಕ್ರಂ ಪ್ರವರ್ತಿಸಿದನೋ,
ಎಲ್ಲಿ ಪರಿನಿರ್ವಾಣವಡೆದಪನೊ,[೨೫] ಆ ದರ್ಶ
ನೀಯ ನಾಲ್ದಾಣಗಳ [೨೬]ಚಾರಿಕದಿ ಕಾಲವಂ
ಕಳೆಯೆ ಮರಣಾತ್ಪರಂ ಸಗ್ಗದಲಿ ಹುಟ್ಟುವಂ.'
ಆನಂದನಿನ್ನು 'ಭಗವಂತ, ಹೆಂಗಸರೊಡನೆ
ಎಂತು ವರ್ತಿಸಲಕ್ಕು?' ಎನಲು, 'ಕೇಳಾನಂದ,
ನೋಡದಿರಿ,' 'ಭಗವಂತ, ನೋಡಬೇಕಾಗೆ ನಾ
ವೇಂ ಗೆಯ್ಯಲಕ್ಕು?' ಎನೆ, 'ಆನಂದ. ಅವರೊಡನೆ
ಮಾತಾಡದಿರಿ,' 'ಅವರೆ ನಮ್ಮೊಡನೆ ಮಾತಾಡೆ
ಏನೆಸಗಲಕ್ಕು ಭಗವಂತ?' ಎನೆ, 'ಆನಂದ
ಅಂತಾಗೆ ಹಿರಿಯರಂ ತಾಯೆಂದು, ಸರಿಯರ
ನ್ನಕ್ಕತಂಗಿಯರೆಂದು, ಕಿರಿಯರಂ ಕೂಸೆಂದು
ಭಾವಿಸುತ ಕಟ್ಟೆಚ್ಚರಿರಿ' ಎಂದನಮಿತಾಭ.
ಆನಂದನಾಗ 'ಭಗವಂತನ ಶರೀರದಾ
ಅಂತಿಮ ವ್ಯವಸ್ಥೆಯನ್ನೆಂತೆಸಗಬೇಕು?' ಎನೆ,
'ಆನಂದ, ಸುಗತನ ಶರೀರಕಂತಿಮ ಪೂಜೆ
ಸಲಿಸೆ ಪೇಚಾಡದಿರಿ; ಸುಗತನಲಿ ಶ್ರದ್ಧಾಳು
ವೆನಿತೊ ಬ್ರಾಹ್ಮಣರೆನಿತೊ ಕ್ಷತ್ರಿಯರು ಬಂದದಂ
ನೆರವೇರಿಸುವರು. ನೀವಾದರೆ ಸದರ್ಥದಲಿ
ಘಟಿಸಿರಿ, ಸದರ್ಥವನ್ನನುಯೋಜಿಸಿರಿ, ಸಾವ
ಧಾನಿಸಿರಿ, ಉದ್ಯೋಗಿಸಿರಿ!' ಎಂದ ಸುಗತಂ.

ಆಗಳಾನಂದಂ ವಿಹಾರವನ್ನೊಳವೊಕ್ಕು
ಕಪಿಶೀರ್ಷಕೊರಗಿ[೨೭] ನಿಂದಕಟಿನ್ನು ಶೈಕ್ಷನಹೆ
ನನಿತರೊಳೆ [೨೮]ಶಾಸ್ತನಿದೊ ಪರಿನಿರ್ವೃತಿಸಲಿರುವ
ನೆನಿತೆನ್ನೊಳಾತನನುಕಂಪೆ! ಮುಂಜಾವದಲಿ
ಮೊಗತೊಳೆಯೆ ನೀರನಿನ್ನಾರಿಗಾಂ ತಹೆ? ಯಾರ

ಕಾಲನೊರಸುವೆ? ಯಾರ ಹಾಸ ಹಾಸುವೆ? ಯಾರ
ಪತ್ತಚೀವರವೆತ್ತಿ[೨೮] ಹಿಡಿವೆ? ಸೇವಿಸುವೆನಿ
ನ್ನಾರನಿನ್ನಾರೆನಗೆ ಶಾಸ್ತನೆಂದಳುತಿರಲು,
ಬುದ್ಧನಾನಂದನೆಲ್ಲಿಹನೆಂದು ಕೇಳಿ, ಕೆಲ
ದೊಳೆ ವಿಹಾರದೊಳಗುನನೆಂದರಿತು ಕರತರಿಸಿ,
ಇಂತೆಂದನಾತನಿಗೆ—'ಶೋಕಿಸದಿರಾನಂದ,
ಪ್ರಿಯವೆಲ್ಲವಿಂದ ನಾವಗಲಬೇಕೆಂದವಂ
ನೀಗಬೇಕೆಂದವುಗಳಿಂ ಬೇರೆಯಾಗಬೇ
ಕೆಂದು ನಿನಗಾನಂದ ಮುನ್ನೆ ನಾನರುಹಿಲ್ಲ?
ಯಾವುದಕೆ ಹುಟ್ಟಿದೆಯೊ ಇರವಿದೆಯೊ ಬೆಳವಿದೆಯೊ
ನಾಶಧರ್ಮಕೆ ಸಾಜದಿಂದದೀಡಾಗಿರಲು
ನಾಶವದಕಿಲ್ಲದಿರೆ ಶಕ್ಯವೇನಾನಂದ?
ಮರುಗದಿರು, ದೀರ್ಘಕಾಲದ ಮನೋವಾಕ್ಕಾಯ
ಮೈತ್ರದಿ ತಥಾಗತನಿಗತಿನಿಕಟನಹೆ, ಪುಣ್ಯ
ವಂತನಹೆ; ಅನುಯೋಜಿಸಯ್ಯ, ಕ್ಷಿಪ್ರಮೆ[೨೯]ಅನಾ
ಸ್ರವನಪ್ಪೆ ಆನಂದ!' ಆನಂದನಾಗ, ಭಗ
ವಂತನೀ ಕುಶಿನಾರದಂಥ ಕೀಳೂರಲ್ಲಿ
ಜಾಂಗಲ ನಗರದಲ್ಲಿ ಪರಿನಿರ್ವೃತಿಸಲೇಕೆ?
ಪಂಚತ್ವವಯ್ದಲಾ ಯೂಥನಾಥಗೆ ಮಹಾ
ಕಾಂತಾರವಲ್ಲದೇಂ ಕಿರಿಯ ತೋಟವೆ? ಅಸ್ತ
ವಯ್ದಲಾ ಲೋಕಲೋಚನಗೆ ಪಾರಾವಾರ
ವಲ್ಲದೇಂ ಕ್ಷುದ್ರ ಸರಸಿಯೆ? ನೋಡ ಭಗವಂತ,
ಚಂಪೆ ಇಲ್ಲಾ? ರಾಜಗೃಹವಿಲ್ಲ? ಶ್ರಾವಸ್ತಿ
ಇಲ್ಲ? ಸಾಕೇತ-ಕೌಶಾಂಬಿ ಇಲ್ಲಾ? ವಾರ
ಣಾಸಿ[೩೦] ಇಲ್ಲಾ? ಅವಲ್ಲಾವೊಂದರಲ್ಲಿ ಪರಿ
ನಿರ್ವೃತಿಸಬಹುದಲ್ಲ? ಸುಗತಸಲಿ ಶ್ರದ್ಧಾಳು
ವೆನಿತೊ ಬ್ರಾಹ್ಮಣರೆನಿತೊ ಕ್ಷತ್ರಿಯರು ಧನಿಕರ
ಲ್ಲಿಹರವರು ಒಂದು ಭಗವಂತನ ಶರೀರವಂ
ಪೂಜಿಸುವರೆನೆ, ತಥಾಗತನದಕೆ ಇಂತೆಂದ—
'ಅಂತೆನದಿರಾನಂದ, ಈ ಊರ ಕೀಳೂರು

ಜಾಂಗಲ ನಗರವೆನ್ನದಿರು. ಎನಿತೊ ಹಿಂದೊಮ್ಮೆ
ಕೇಳೈ ೧೧ಮಹಾಸುದರ್ಶನನೆಂಬ ಧಾರ್ಮಿಕಂ
ಚಕ್ರವರ್ತಿಯ ರಾಜಧಾನಿಯಾದೀ ಕುಶಾ
ವತಿ, ಯಕ್ಷಧಾನಿ ೧೨ಅಳಕಮಂದಮಾಕೀರ್ಣ
ಯಕ್ಷಮೆಂತು ಸುಭಿಕ್ಷಮೆಂತಂತೆ ಬಹುಜನಾ
ಕೀರ್ಣಂ ಸುಭಿಕ್ಷಂ ಗಡಾ ತಾನೆನಿಸಿ, ಹಸ್ತಿ
ಶಬ್ದದಿಂದಶ್ವಶಬ್ದದಿ, ತೇರ ಶಬ್ದದಿಂ,
ಭೇರಿಶಬ್ದ ಮೃದಂಗಶಬ್ದದಿಂ, ವಲ್ಲಕೀ
ಶಬ್ದದಿಂ, ಗೀತಶಬ್ದದಿ, ಶಂಖಶಬ್ದದಿಂ,
ತಾಲಶಬ್ದದಿ, ತಿನ್ನಿ ಕುಡಿಯಿಮಾನಂದಿಸಿರಿ
ಎಂಬೀ ದಶಮ ಶಬ್ದದಿಂದ ಹಗಲಿರುಳೆಂತು
ಗಲಗಲಿಸುತಿತ್ತು! ನೀನಿನ್ನು ಕುಶಿನಾರವ
ನ್ನಯ್ದಿ ಆನಂದ, ಅಲ್ಲಿಯ ಮಲ್ಲರಿಗೆ ಇಂದು
ರಾತ್ರಿಯಂತಿಮ ಯಾಮದಲಿ ತಥಾಗತನ ಪರಿ
ನಿರ್ವಾಣವಾಗಲಿಹುದೆಂದರುಹಿ ಬಾರ!'

ಅಂತಾಗಲೆಂದು ಆನಂದನಲ್ಲಿಂದೆದ್ದು
ಕುಶಿನಾರಕಯ್ದಿ ಯಾವುದೊ ಕಾರ್ಯಕಾಗಿ ೧೩ಸಂ
ಸ್ಥಾಗಾರದಲ್ಲಿ ಕೂಡಿರೆ ಮಲ್ಲರಲ್ಲಿ ಒಳ
ವೊಕ್ಕು, 'ವಾಸಿಷ್ಠರೆ,೧೪ ತಥಾಗತಂ ಕುಶಿನಾರ
ದುಪವರ್ತನದ ಸಾಲವನದೊಳೀ ರಾತ್ರಿಯಂ
ತಿಮ ಯಾಮದಲ್ಲಿ ಪರಿನಿರ್ವಾಣವಡೆದಪಂ!
ಪೇಳ್ದೆನಿದೊ ಬನ್ನಿರಲ್ಲಿಗೆ. ತಥಾಗತನೆಮ್ಮ
ಗ್ರಾಮದೊಳೆ ಪರಿನಿರ್ವೃತಿಸಿದನಾದೊಡಮೆಮಗೆ
ಅವನ ಪಶ್ಚಿಮ ದರ್ಶನಂ ಕಟಾ ಲಭಿಸಿಲ್ಲ!
ಹೊರಗೆ ಪೂರ್ಣಾಧಿಕಮಪೂರ್ವ ಚಂದ್ರಗ್ರಹಣ
ವಾಗಲರಿಯದೆ ನಿದ್ದೆಯೊಳಗೆ ಹೋಗಾಡಿದೆವೆ!
ಎಂದಿನ್ನು ಮರುಗದಿರಿ' ಎಂದರುಹಿ ತೆರಳುವುದೆ,
ಮಲ್ಲರೆಲ್ಲರು ಗಂಡುಹೆಣ್ಣು ಒಂದಾಗಿ ಕಡು
ದುಮ್ಮಾನದಿಂದ ಕೂದಲು ಕೆದರಿ ತೋಳ್ಗಳಂ

ನೀಡಾಡಿ ಹೊರಳಾಡಿ, 'ಅಕಟಿನಿತು ಬೇಗ ಪರಿ
ನಿರ್ವಾಣವಯ್ದುವನೆ ಭಗವಂತ! ಅಕಟಿನಿತು
ಬೇಗ ಪರಿನಿರ್ವೃತಿಸುವನೆ ಸುಗತ! ಇನಿತತಿ
ಕ್ಷಿಪ್ರಮಂತರ್ಧಾನವಹುದೆ ಲೋಕದಿ ಲೋಕ
ಚಕ್ಷುವಕಟಾ!' ಎಂದು ಗೋಳಾಡಿ ಅಳಲಾಡಿ,
ಗಂಡುಹೆಣ್ಣೆಲ್ಲರೊಡಗೂಡಿ ಅಲ್ಲಿಂದೆದ್ದು
ನಡೆದರವರೊಡನೆ ನೆಟ್ಟಗೆ ಸಾಲವನಕೆ.

ಅನಿತರೊಳೆ ತನ್ನ ಬಂಧುವಿನ** ದೇಹಾತ್ಯಯಂ
ಕಾಣಲಾರದೆ ಅಕಟ! ಆದಿತ್ಯನಸ್ತಮಿಸೆ,
ಒಯ್ಯನೊಯ್ಯನೆ ಹಕ್ಕಿ ತಲೆವಾಗಿ ಗೂಡುಗೊಳೆ,
ಒಲವಂದು ಪೋಪೆವೆನೆ ಗಬ್ಬಿಲಂ ಸುಳಿದಾಡೆ,
ಈ ಶೋಕವಾರ್ತೆಯಂ ಮುಂದಿಳುಹಲೆನೆ ಗಾಳಿ
ಒಟ್ಟಿಯಲಿ ಟಿಟ್ಟಿಭಂ ಟಿಟ್ಟಿಸುತ ತೊಳಲಾಡೆ,
ಸುಗತನಂ ಬೀಳ್ಕೊಡುವ ಪಶ್ಚಿಮೋತ್ಸವದೊಳೆ
ತ್ತೆತ್ತಲುಂ ಬೆಳೆವ ದೀಪಾವಳಿಯೊ ಎನಲು ಮನೆ
ಮನೆಯ ದೀಪಂ ಮಿಂಚುಹುಳದ ದೀಪಂ ಬೆರಸು
ಜಾನೊಳಂತೆಯೆ ನೀರೊಳುಡುವ ದೀಪಂ ಬೆಳಗೆ,
ಅಂದಿಗಿದೆ 'ವೈಶಾಖ ಪೂರ್ಣಮಿಗೆ ಜನಿಸಿ ಮೇ
ಣಿಂದಿಗದೆ ವೈಶಾಖ ಪೂರ್ಣಮಿಯೊಳಿರುಳು ಪರಿ
ನಿರ್ವಾಣ ಹೊಂದುವೆನ್ನಾತನನ್ನಿರುಳುದ್ದ
ಕೊನೆಗೊಮ್ಮೆ ಕಣ್ದೆರೆವೆ ಕಾಂಬೆನೆಂದೆನೆ ಮಂಜು
ಕಂಬನಿಯ ಮಿಡಿಯುತ್ತ ತೊಡೆಯುತ್ತಲಿದೊ ಸುಧಾ
ಸೂತಿ ಮೂಡಣ ಗಗನದಲಿ ನುಣ್ಣನಡರಿ ಬರೆ,
ದುರ್ಮಾನದಿಂ ಮಲ್ಲರಳಲಾಡಿ ಗೋಳಾಡಿ
ಗಂಡುಹೆಣ್ಣೆಲ್ಲರೊಡಗೂಡಿ ನಡೆತರೆ ಸಾಲ
ವನಕಸಿಬರಂ ಕಾಣಲಾನಂದಗಿಂತೆನಿಸಿ
ತಾಗ—'ಇವರಿಸಿಬರನ್ನೊಬ್ಬೊಬ್ಬನಾಗಿ ವಂ
ದಿಸಲೀಯೆ ಭಗವಂತನಂ ಮಲ್ಲರಿವರೆಲ್ಲ
ವಂದಿಸುವ ಮುನ್ನಮೆ ವಿಭಾತಿಸದಿರದು ರಜನಿ!

ಆದರಿಸಿವರಂ ಕುಲಕ್ರಮದಿಂದ ವಿಂಗಡಿಸಿ
ಒಂದೊಂದೆ ಕುಲವ ಭಗವಂತಗೊಪ್ಪಿಸುತ, ಭಗ
ವಂತ ಇತ್ಥಂನಾಮ ಮಲ್ಲಂ ಸಪುತ್ರಂ ಸ ೪೫೫
ಭಾರ್ಯಂ ಸಪರಿವಾರಮಿದೊ ನಿನ್ನ ಪದಯುಗಕೆ
ತಲೆವಾಗಿ ವಂದಿಸುವನೆಂದಿವರ್ಗೆ ಸುಗತನ
ನ್ನಂತು ವಂದಿಸಲೀವೆ.' ಇಂತೆಂದು ಆನಂದ
ಮಲ್ಲರವರಂ ಕುಲಕ್ರಮದಿಂದ ವಿಂಗಡಿಸಿ,
ಕಾರಿರುಳಿನಲಿ ರಾಜಬೀದಿಯಲಿ ಕೆಯ್ಸಂಜ ೪೪೦
ನೆತ್ತಿ ಹೋಹಂದು ಬೆಳಕೊಂದೊಂದೆ ಮನೆದೋರಿ
ಮಿಕ್ಕವಂ ಬಿಡುವಂತೆ, ಒಂದೊಂದೆ ಕುಲವ ಮುಂ
ದರಿಸಲಾ ಕುಲವಂತು ಭಗವಂತನಡಿಗೆರಗಿ
ಬಲವಂದು ಕೆಯ್ಮುಗಿದು ಬಳಸಿ ನಿಂದಿರೆ, ತಥಾ
ಗತನವರನೆಲ್ಲ ಕುಳ್ಳಿರಿಸುತಿಂತೆಂದ೫೬— ೪೪೫

'ವೀರರಿರ, *ವೀರಸೂಗಳಿರ, ಕೇಳಿರಿ ನಿಮಗೆ
ಧರ್ಮವ ಸಮಾಸತಃ ಪೇಳ್ವೆ. ನೂರಾಳ್ಗಳಂ
ರಣದಿ ಗೆದ್ದವಗಿಂತ ತನ್ನ ತಾಂ ಗೆದ್ದವನೆ
ಜೇತರೊಳಗುತ್ತಮಂ. ನಿರ್ವೈರದಿನೆ ವಿನಾ
ವೈರದಿಂದಾ ವೈರವಾರದಕ್ರೋಧದಿಂ ೪೫೦
ಕ್ರೋಧವಂ, ಸಾಧುತನದಿಂದಲೆ ಅಸಾಧುವಂ,
ದಾನದಿ ಕದರ್ಯವಂ, ಸತ್ಯದಿನಸತ್ಯವಂ
ಗೆಲಲಕ್ಕು. ರಾಗದೊಲು ಕೆಚ್ಚಿಲ್ಲ, ದ್ವೇಷದೊಲು
ನೆಗಳಿಲ್ಲ, ಮೋಹದೊಲು ಬಲೆಯಿಲ್ಲ, ತೃಷ್ಣೆಯೊಲು
ಸೆಳವಿಲ್ಲ, ಶಾಂತಿಯಂ ಮಿಕ್ಕನ್ಯ ಸುಖವಿಲ್ಲ. ೪೫೫
ಕಳ್ಳು, ಕೊಲೆ, ಕಳ್ಳತನ, ಸುಳ್ಳು, ಹಾದರ, ಮೋಸ
ವತಿತಿಂಡಿ, ಜೂಜಿವಕೆ ಗಂಟುಬಿದ್ದವನಿಲ್ಲೆ
ತನ್ನ ಬೇರಗೆದಪಂ. ಮಲ್ಲರಿರ ಆದುದರಿ
ನಾ ವ್ಯಸನಗಳ ಗೋಜಿಗಾಗದಿರಿ. ಮೆಯ್ಗಳ್ಳ
ರಾಗದಿರಿ, ನಿದ್ದೆಗೀಡಾಗದುದ್ಯೋಗಿಸಿರಿ. ೪೬೦
ಕೊಬ್ಬಿಂತು ಕರಗುವ್ರದೊ ಮತಿಯಂತು ಮಿರುಗುತಿದೆ.

*ವೀರಸೂ = ವೀರಮಾತೆ.

ತಾಯ್ತಂದೆಯರ ಸದಾ ಸೇವಿಸಿರಿ, ಮಕ್ಕಳಂ
ಮಡದಿಯನ್ನರ್ತಿಸಿರಿ. ಶ್ರದ್ಧೆ, ಶೀಲಂ, ಲಜ್ಜೆ,
ಲೋಕಾಪವಾದಭಯ, ವಿದ್ಯೆ, ಸ್ವಾರ್ಥತ್ಯಾಗ,
ಪ್ರಜ್ಞೆ ಎಂಬಿನ್ನಿಯಿಂ ಸುಡದ, ನೀರಂ ನಾಂದ ೪೬೫
ದರಸರುಂ ಕಳ್ಳರುಂ ದಾಯಾದರುಂ ದೋಚ
ದೀ ಸಪ್ತಧನವ ಸಂಗ್ರಹಿಸಿ. ವಾಸಿಷ್ಠರಿರ,
ತನ್ನ ಜೀವವ ತೀದು ತನ್ನೇಕಸುತನ ತಾ
ಯೆಂತು ರಕ್ಷಿಪಳಂತೆ ನಿಂತಲ್ಲಿ ನಡೆವಲ್ಲಿ
ಕುಳಿತಲ್ಲಿ ಕೆಡೆವಲ್ಲಿ ಎಚ್ಚರಿರುತೆಲ್ಲವಾ ೪೭೦
ಜೀವಿಗಳೊಳಪರಿಮಿತ ಮೈತ್ರವಂ ತೋರುತಿರಿ,
ಇದನೆ ಬ್ರಹ್ಮವಿಹಾರವೆಂಬರಿದೊ ಮಲ್ಲರಿರ
ಅಪ್ರಮಾದವೆ ಅಮೃತಪದವೆಂಬುದರಿನಪ್ರ
ಮತ್ತರಾಗಿರಿ. ನಿಮ್ಮ ಧರ್ಮವಂ, ನಿಮ್ಮ ಸಾ
ಮ್ರಾಜ್ಯವನ್ನನ್ಯರಲಿ ಹೊರಿಸೆ ಮೇಲ್ವಾಯದಿರಿ. ೪೭೫
ಯಾರನ್ಯ ಧರ್ಮವಂ, ಯಾರನ್ಯ ಜನಗಳ
ಸ್ವಾತಂತ್ರ್ಯವಂ ಮನ್ನಿಸುವರೊ ತಮ್ಮದರಂತೆ,
ಅವರ ಧರ್ಮಂ, ಜನಂ, ಸ್ವಾತಂತ್ರ್ಯ ಬಾನಂತೆ
ಬೆಳೆಯುತಿದೆ; ಯಾರನ್ಯ ಧರ್ಮವನ್ನನ್ಯರ
ಸ್ವಾತಂತ್ರ್ಯ ಕೆಡಿಸುವರೊ ಅವರ ಧರ್ಮಂ, ಜನಂ, ೪೮೦
ಸ್ವಾತಂತ್ರ್ಯವೆದ್ದ ತೆರೆಯಂತೆ ಕುಸಿದಳಿಯುತಿದೆ.
ಇದುದರಿನಾರೊಳಂ ಸರ್ವಥಾ ಮೇಲ್ಗೈಯ್ಯ
ನೆತ್ತದಿರಿ, ಕಡೆಗದರಿನಾತ್ಮ ನಿರ್ಮೂಲನಂ
ಹೊರತು ದೀರ್ಘಂ ಬಾಳ್ದರಿಲ್ಲ, ಬಳೆದವರಿಲ್ಲ.
ಪ್ರತ್ಯೇಕ ಮಾನುಷಮಮಾನುಷಂ ಕಾರ್ಯಕಿದೆ ೪೮೫
ತತ್ಸಮಂ ಪ್ರತಿಕಾರ್ಯವದೆ ಗಡಾ ಪ್ರಕೃತಿಯವಿ
ಕಾರ್ಯ ನಿಯಮಂ. ಕೊನೆಗೆ ವಾಸಿಷ್ಠರಿರ ಕೇಳಿ,
ತಾಸನ್ಯಗೆಸಗಿದಾ ಕೆಡುಕೆ ತನ್ನಯ ಕೆಡುಕು,
ಒಳಿತೆ ತನ್ನಯ ಒಳಿತು. ಯಾವ ಪಾಪವನಾನು
ಮಿಸುಗದಿರಿ, ಒಳ್ಳಿತನೆ ಎಸಗುತಿರಿ, ಚಿತ್ತವಂ ೪೯೦
ಶುದ್ಧಿಸಿರಿ. ಇದೆ ಗಡಾ ಬುದ್ಧರಸುಶಾಸನಂ!'

ಈ ಸುಧಾಸೂಕ್ತಿಯಂ ಮುಲ್ಲರಾಲಿಸುತ, 'ಭಗ
ವಂತ, ತುಂಬಿದ ತಟಾಕದ ಹಾಂಸೆ ಹೋಹಂತೆ,
ಬರಿಯ ದೊಣೆಯೊಳಗೆ ಕಣೆ ತೀವಂತೆ, ನೆಲಹತ್ತಿ
ದಂಬಿಯಿಂ ನೀರ ಮೊಗೆವಂತೆ, ನೂರಾರು ಜಲ
ಕುಂಭದಲಿ ತರಣಿ ನೆರೆವಂತೆ, ಬಡಬಗ್ಗನಿಗ
ಯಾಚಿತಂ ಕಾಲೆಡಪಿ ನಿಧಿಯೊಡವಿದಂತೆಮಗೆ
ಭಗವಂತನಿಂದ ಧರ್ಮಂ ತಿಳಿದುದಜ್ಞಾನ
ವಳಿದುದೈ ಜಯಜಯಾ!' ಎಂದು ಜೋಹರಿಸುತಾ
ಮುಲ್ಲರೆಲ್ಲರು ತೆರಳಲಿರುಳ ಮೊದಲಿನ ಜಾಮ
ಸರಿಯೆ ಮೃಗಲಾಂಛನಂ ಮಾರುದ್ದವರಿದಂ.

ಆಗ ಕುಶಿನಾರದಲ್ಲಿರುವೊರುವನಾ ಪ್ರಿ
ವ್ರಾಜಕ ಸುಭದ್ರನಿದೊ ಇಂದಿನಿರುಳಿನ ಕೊನೆಯ
ಜಾಮದೊಳೆ ಶ್ರಮಣ ಗೌತಮನ ಪರಿನಿರ್ವಾಣ
ವಹುದೆಂದು ಕೇಳಿ, ಕೂಡಲೆ ಸಾಲವನಕಯ್ದಿ
ಆನಂದನೊಡನೆಂದ — 'ವೃದ್ಧರಿಂ ಪ್ರಾಚಾರ್ಯ
ರಾಚಾರ್ಯರಿಂ ಮಹಲ್ಲಕ ಪರಿವ್ರಾಜಕರಿ
ನೆಂದೊ ಒಮ್ಮೊಮ್ಮೆ ಇಹಲೋಕದಿ ತಥಾಗತಂ
ಜನಿಸುತಿಹನೆಂದು ಕೇಳಿರುವೆನಿಂದಿರುಳಿನೊಳೆ
ಶ್ರಮಣ ಗೌತಮನ ಪರಿನಿರ್ವಾಣವಹುದಂತೆ,
ಕಡಲ ನಡಸುವ ಶೈಲದೀಪವಾರುವುದಂತೆ,
ನಾಡನೂಡಿಸುವ ಸ್ರವಂತಿ ಬತ್ತುವುದಂತೆ!
ನನ್ನ ಮನಕದಡಿಸುವ ಶಂಕೆಯನವಂಗರುಹೆ
ಧರ್ಮೋಪದೇಶದಿಂದವನದಂ ಪೊಣಿಸುವ,
ಕೊಳಚೆ ನೀರೊಳಗೆಸ್ಸೆ ಹುಯ್ದಂತೆ, ಕಣ್ಣ ಪರೆ
ತೆಗೆದಂತೆ, ಇರುಳೊಡೆವ ರವಿಯಂತೆ ಕಾಣಿಸುವ
ನೆಂದು ನಂಬಿರುವೆನವದಿಂ ಶ್ರಮಣ ಗೌತಮನ
ದರ್ಶನವನೆನಗೆ ದೊರಕೊಳಿಸೆಯಾ ಆನಂದ?'
ಆನಂದನದಕೆಂದ — 'ಕಾಡಬೇಡೈ ತಥಾ
ಗತನ, ಗೆಳೆಯ ಸುಭದ್ರ, ದಣಿದಿಹಂ ಭಗವಂತ.'

ಮತ್ತೊಮ್ಮೆ ಮಗುಳೊಮ್ಮೆ ಅಂತೆ ಯಾಚಿಸೆ ಪರಿ
ವ್ರಾಜಕ ಸುಭದ್ರನದಕಂತೆ ಆನಂದನು
ತ್ತರವೀಯಲವರ ಸಂಭಾಷಣವನಾಲಿಸಿದ
ಭಗವಂತನಾನಂದನಂ ಕರೆದು, ಆನಂದ
ತಳುವದೆ ಸುಭದ್ರಗೆ ತಥಾಗತನ ಕಾಣಿಸಾ,
ಯಾವುದಂ ಕೇಳುವನೊ ನನ್ನನಾತನದೆಲ್ಲ
ಜಿಜ್ಞಾಸೆಯಿಂದಲ್ಲದೆನ್ನ ಕಾಡುವನಲ್ಲ,
ಕಾಂಬೊಡನೆ ಕಣ್ಣು ಬಾಂದಳವನೊಳಕೊಳುವಂತೆ
ಹಚ್ಚುವದೆ ದೀವಿಗೆಯ ಬೆಳಕು ಮನದೀವಂತೆ,
ತೆರೆವೊಡನೆ ಜಾಳಿಗೆಯ ಗಾಳಿಯೊಳವೊಗುವಂತೆ,
ನನ್ನ ಮಾತನ್ನವಂ ಗ್ರಹಿಸುವಂ ಕ್ಷಣದೊಳೆನೆ.
ಆನಂದನೊಡನೆ, ಗೆಳೆಯ ಸುಭದ್ರ ಬಾರಿತ್ತ
ಲಿದೊ ನಿನ್ನ ಕರೆದಪಂ ಭಗವಂತನೆಂದವನ
ಬುದ್ಧನ ಸಮಕ್ಷಕಯ್ದಿಸಲವಂ ಸುಗತನಂ
ವಂದಿಸುತ ಕೆಲದೆ ಕುಳಿತಿಂತು ಕೇಳ್ದಂ—'ಪೂರ್ಣ
ಕಶ್ಯಪಂ, ಮಸ್ಕರೀ ಗೋಶಾಲ, ಮೋಣಜಿತ
ಕೇಶಕಂಬಲಿ, ಪಕುಧ ಕಾತ್ಯಾಯನಂ ಮತ್ತೆ
ಬೇಲಟ್ಠಿಪುತ್ರ ಸಂಜಯನಂತೆ ನಿರ್ಗ್ರಂಥ
ಜ್ಞಾತಪುತ್ರಂ' ಕಣಾ ಈ ಶ್ರಮಣಬ್ರಾಹ್ಮಣರು,
ಗಣಿಗಳು, ಗಣಾಚಾರ್ಯರುಂ, ಜ್ಞಾತರುಂ, ಯಶ
ಸ್ವಿಗಳು, ತೀರ್ಥಂಕರರು, ಸಾಧುಸಮ್ಮತರು ತಂ
ತಮ್ಮ ಹೇಳಿಕೆಯಂತೆ, ಗೌತಮ, ಗಡಾಭಿಜ್ಞರಹರೆ? ಅಲ್ಲವೆ? ಕೆಲರಭಿಜ್ಞರಿರುವರೆ? ಕೆಲರ
ಭಿಜ್ಞರಲ್ಲವೆ? ತಿಳಿಯಪಡಿಸೈ ಭದಂತ!"

ಅದಕೆ ಮೆಲ್ಲನೆ ಬುದ್ಧನಿಂತೆಂದ—'ಸಾಕದಂ
ತಿರಲಿ, ತಿಳಿದರೊಳ್ಗಂ ಧರ್ಮವನ್ನುಪದೇಶ
ಗೆಯ್ವೆ, ಕೇಳ ಸುಭದ್ರ. ''ಕಾಮಸುಖದೊಂದು ಮೇ
ಲ್ದೇಹದಂತಸೆಯದೊಂದಿಂತಿವೆ ಪಥದ್ವಯಂ,
ಹೀನಮುಭಯಮನರ್ಥಕರಮನಾರ್ಯಂ ಗಡಾ!

ಪ್ರವ್ರಜಿತರಿಗೆ ಸಲ್ಲವದರಿನೆರಡಂ ತಥಾ ೫೫೦
ಗತನುಳಿದು, ೪೧ಉಪಶಮವಭಿಜ್ಞೆ ಸಂಬೋಧವಂ
ನಿರ್ವಾಣವಂ ಪಡೆಯಲೀ ಜ್ಞಾನದಾಯಕಂ
ದೃಷ್ಟಿದಾಯಕಮಾರ್ಯವಷ್ಟಾಂಗ ಮಾರ್ಗವೆಂ
ಬಖಿಲಾತಿಶಾಯಿ ಮಧ್ಯಮ ಮಾರ್ಗವಂ ಕಂಡು
ಕೊಂಡಿಹಂ. ೪೨ದೃಷ್ಟಿ, ಸಂಕಲ್ಪ, ವಚನಂ, ಕರ್ಮ ೫೫೫
ವಾಜೀವ, ವ್ಯಾಯಾಮ, ಸ್ಮೃತಿ, ಸಮಾಧಿ, ಇವೆಂಟು
ಸಮ್ಯಕಾಗಿರಲದುವೆ ಆರ್ಯವಷ್ಟಾಂಗಿಕಂ
ಮಾರ್ಗ! ಕೇಳ ಸುಭದ್ರ, ಜನ್ಮ ಗಡ ದುಃಖ, ಜರೆ
ದುಃಖ, ವ್ಯಾಧಿಯೆ ದುಃಖ, ಮರಣಂ ಗಡಾ ದುಃಖ,
ಅಪ್ರಿಯ ಸಮಾಗಮವೆ ದುಃಖ, ಪ್ರಿಯರ ವಿಯೋಗ ೫೬೦
ವದೆ ದುಃಖ, ವಾಂಛಿತಾಲಾಭ ಗಡ ದುಃಖವೀ
ದುಃಖಗಳೆ ದಲ್ ಪ್ರಥಮಮಾರ್ಯಸತ್ಯಂ. ಮತ್ತೆ
ದೈಹಿಕ ಸುಖಾಭಿಲಾಷೆಯ ಕಾಮತೃಷ್ಣೆ, ಭವ
ಭವಗಳಭಿಲಾಷೆಯಾ ಭವತೃಷ್ಣೆ, ಮರುಭವವ
ತೊಡೆದು ಕೊಳುವಾ ವಿಭವತೃಷ್ಣೆ, ಈ ತೃಷ್ಣೆಗಳೆ ೫೬೫
ದುಃಖಕಾರಣವೆಂಬುದದೆ ಎರಡನೆಯ ಆರ್ಯ
ಸತ್ಯ. ಆ ತೃಷ್ಣೆಗಳನೆಲ್ಲ ವೈರಾಗ್ಯದಿಂ
ನಿಪ್ಪಟ ನಿರೋಧಿಸಿ ಪರಾಙ್ಮುಖಿಸಿ ನೀಗಿ ಬಿಸು
ಟವುಗಳಿಂ ನೆರೆ ಮುಕ್ತನಹುದೆ ದುಃಖನಿರೋಧ
ವೆಂಬ ಮೂರನೆಯಾರ್ಯಸತ್ಯ. ದುಃಖನಿರೋಧ ೫೭೦
ಗಾಮಿ ಮಾರ್ಗವೆ ನಾಲ್ಕನೆಯ ಆರ್ಯಸತ್ಯವಾ
ಮಾರ್ಗವೆನೆ ಆರ್ಯವಷ್ಟಾಂಗ ಮಾರ್ಗಂ ಕಣಾ!
ಆ ಮಾರ್ಗದೊಳೆ ನಡೆಯೆ ಉಪಶಮವಭಿಜ್ಞೆಯಂ,
ಸಂಬೋಧವಂ, ಕೊನೆಗೆ ರಾಗ-ಮೋಹ-ದ್ವೇಷ
ವಳಿದು ನಿರ್ವಾಣವೆಂಬಚ್ಯುತಪದಂ ಪಡೆವೆ! ೫೭೫
ಮತ್ತೆ ಕೇಳ ಸುಭದ್ರ, ಅಷ್ಟಾಂಗಿಕಂ ಮಾರ್ಗ
ಯಾವ ಧರ್ಮದೊಳಿಹುದೊ ಶ್ರಮಣನದರಲ್ಲಿಹಂ,
ಬೇರೆ ಧರ್ಮದಿ ಶ್ರಮಣನಿಲ್ಲವೀ ಧರ್ಮದೊಳೆ
ಅಷ್ಟಾಂಗ ಮಾರ್ಗವಿದೆ, ಶ್ರಮಣನಿದರಲ್ಲಿಹಂ.

ಲೋಕವರ್ಧಂತವಿಂ ಶೂನ್ಯವಾಗದ ತೆರದಿ
ಭಿಕ್ಷುವೀ ಧರ್ಮದೊಳೆ ಸಮ್ಯಗ್ವಿಹಾರಿಸುಗೆ.
ಕುಶಲವನ್ನರಸಿ ಇಪ್ಪತ್ತು ಮೇಣೊಂಬತ್ತ
ನೆಯ ವಯಸೊಳಾಂ ಪರಿವ್ರಜಿಸಿಂದಿಗಾದುದ
ಯ್ತತ್ತೊಂದು ವರುಷವಷ್ಟಾಂಗ ಮಾರ್ಗದ ಹೊರತು
ಧರ್ಮಪ್ರದೇಶದಲಿ ವರ್ತಿಸುವ ಶ್ರಮಣನೆನೆ,
ಬಲದಾ ಅರಳಂತೆ, ಗಾಳಿಯಾ ನೆರಳಂತೆ,
ಗರಿಯಿರದ ಖಗದಂತೆ, ಹೆರೆಬಿಡದುರಗದಂತೆ,
ಯಾರಿಲ್ಲ.' ಅಂತೆನೆ ಸುಭದ್ರಂ, ಭದಂತ ಚೆ
ನ್ನುಡಿದೆ, ಚೆನ್ನುಡಿದೆ, ಕವಿಚಿದುದ ನೇರ್ವಡಿಪಂತೆ,
ಮುಚ್ಚಿದುದ ತೆರೆವಂತೆ, ದಾರಿತಪ್ಪಿರೆ ದಾರಿ
ಯೊರೆವಂತೆ, ಕತ್ತಲಲಿ ಸೊಡರ ತೋರ್ವಂತೀಸಿ
ನೋತವಗೆ ನಿಲುಗಾಲು ದೊರೆತಂತೆ, ಕೆರೆಯೊಣಗಿ
ತಳಮಳಿಪ ಮಿಾಂಗೆ ಮಳೆಗರೆದಂತೆ, ಕಣ್ಣರಸಿ
ಜೋಯಿಸಗೆ ಕಾಣಿಸಿದ ಹೊಸ ತಾರೆಯಂತೆನಗೆ
ಭಗವಂತನಿಂದ ಧರ್ಮಂ ಪ್ರಕಾಶಿತವಾಯ್ತು!
ಇನ್ನಿದೊ ಭದಂತ, ಭಗವಂತನಿಗೆ ಶರಣೆಂಬೆ,
ಧರ್ಮಕಾಂ ಶರಣೆಂಬೆ, ಸಂಘಕಾಂ ಶರಣೆಂಬೆ;
ಭಗವಂತನಂತಿಕದೊಳೆನಗೆ ಪ್ರವ್ರಜ್ಯೆಯ
ನ್ನೀಸುಗೆಸೆ, ಭಗವಂತನಾಗ 'ಕೇಳ ಸುಭದ್ರ,
ಅನ್ಯತೀರ್ಥಕನಾರುವಿಾ "ಧರ್ಮ-ವಿನಯದಿ ಪ್ರ
ವ್ರಜ್ಯೆಯಂ ಬಯಸಿ ಬರೆ, ನಾಲ್ಕು ತಿಂಗಳಿಗೆ ಪರಿ
ವಾಸಿಸದ ಮುನ್ನಮಂ ಪ್ರವ್ರಜಿಸಲ್ಪಡಲಾರ
ನಾದೊಡಮಿದೊಪ್ಪುವೆಂ ವ್ಯಕ್ತಿಭೇದವನಿಲ್ಲಿ'
ಎಂದು ಭಗವಂತನಾನಂದನಂ ಕರೆದಿದೊ ಸು
ಭದ್ರಗೆ ಪ್ರವ್ರಜ್ಯೆಯಿಾ ಎನ್ನುವುದೆ, ಸಂಧ್ಯಾರ್ಕ
ನಂತಿಕದೆ ಕೆಂಗಲಿಪ ಶುಕ್ರನೆನೆ, ದೀಪಿಕಾ
ಸ್ತಂಭದಿಂ ಕರದೀಪ ಹಚ್ಚಿತೆನೆ, ಭಗವಂತ
ನಂತಿಕದೆ ಪಡೆದಂ ಪ್ರವ್ರಜ್ಯೆಯ ತಥಾಗತನ
ಕೊನೆಯ ಸಾಕ್ಷಾಚ್ಛಾವಕಂ ಗಡ ಸುಭದ್ರಂ.

ತರುವಾಯ ಭಗವಂತನಿಂತೆಂದ—'ಆನಂದ
ಮುಗಿದುದೈ ಶಾಸ್ತನ ಪ್ರವಚನಂ, ನಮಗಿನ್ನು
ಶಾಸ್ತನಿಲ್ಲೆಂ ಎಂದು ನಿಮ್ಮೊಳಗೆ ಕೆಲವರಿಗೆ
ತೋರಬಹುದಾದೊಡಂತೆಣಿಸದಿರಿ. ಆನಂದ
ಯಾವ ಧರ್ಮವನಾವ ವಿನಯವಂ ಕಲಸಿಹೆನೊ,
ಪ್ರಜ್ಞಾಪಿಸಿಹೆನೊ ನಿಮಗಾ ಧರ್ಮವಾ ವಿನಯ
ವನ್ನೆ ನನ್ನತ್ಯಯದ ಬಳಿಕ ನಿಮ್ಮಯ ಶಾಸ್ತ
ನೆಂದು ಬಗೆಯಿರಿ.' ಮತ್ತೆ ಭಿಕ್ಷುಗಳಿಗಿಂತೆಂದ—
'ಭಿಕ್ಷುಗಳೆ, ಬುದ್ಧಸಂ ಧರ್ಮವಂ ಸಂಘವಂ
ಮಾರ್ಗವಂ ಕುರಿತು ನಿಮ್ಮೊಳಗಾರಿಗಾದೊಡಂ
ಶಂಕೆಯಿರೆ, ವಿಮತಿಯಿರೆ ಕೇಳಿ ನೀವದನೀಗ.
ಶಾಸ್ತನಕಟೆಮ್ಮ ಸಮ್ಮುಖದೊಳಿರೆ ಕೇಳಿಲ್ಲ
ವಲ್ಲ! ಎಂದಿದೊ ಮತ್ತೆ ಮರುಗದಿರಿ.' ಇಂತೊಮ್ಮೆ
ಮತ್ತೊಮ್ಮೆ ಮಗುಳೊಮ್ಮೆ ಗೌತಮಂ ನುಡಿದೊಡಂ
ಭಿಕ್ಷುಗಳ ಸೊಲ್ಲಿಲ್ಲ, ಸದ್ದಿಲ್ಲ, ಸರವಿಲ್ಲ.
ಆಗ ಗೌತಮನೆಂದ—'ಭಿಕ್ಷುಗಳೆ ಶಾಸ್ತನಲ
ಗೌರವದಿ ಕೇಳದಿಹಿರೇನೊ. ಗೆಳೆಯಂಗಿನ್ನು
ಗೆಳೆಯನರುಹುತ್ತಿರಲಿ.' ಆನಂದನಾಗ—'ಭಗ
ವಂತ ವಿಸಚ್ಚರಿಯ! ವಿನದ್ಭುತಂ! ಭಿಕ್ಷು
ಸಂಘವಿದರೊಳಗೊಬ್ಬನಾದೊಡಂ ಭಿಕ್ಷು ಗಡ
ಬುದ್ಧನಲಿ ಧರ್ಮದಲಿ ಸಂಘದಲಿ ಮಾರ್ಗದಲಿ
ಶಂಕೆಯುಳ್ಳವನಿಲ್ಲ! ವಿಮತಿಯುಳ್ಳವನಿಲ್ಲ!'
ಬುದ್ಧನದಕಾನಂದ, ಈ ಭಿಕ್ಷುಸಂಘದಲಿ
ಬುದ್ಧನಲಿ ಧರ್ಮದಲಿ ಸಂಘದಲಿ ಮಾರ್ಗದಲಿ
ಶಂಕೆಯುಳ್ಳವನಿಲ್ಲ, ವಿಮತಿಯುಳ್ಳವನಿಲ್ಲ
ವೆಂದೆಮ ತಥಾಗತಂ ಬಲ್ಲನೀ ಭಿಕ್ಷುವ
ಯ್ನೂರರಲಿ ಕೇಳ ಕೊನೆಯಾತನಾದೊಡಮಿಂಗ
ವೆರಮೆ ''ಸ್ರೋತಾಪನ್ನನಾಗಿಹಂ, ಮುಂದೆ ಗಡ
ಸಂಬೋಧಿವಡೆಯಲಿಹನೆಂದು ಕೊಸಗಿಂತೆಂದ—
'ಭಿಕ್ಷುಗಳೆ ಪೇಳ್ವೆ, ''ವ್ಯಯಧರ್ಮವೀ ಸಂಸ್ಕಾರ,

ಸಾವಧಾನದೊಳೆ ಉದ್ಯೋಗಿಸಿರಿ!' ಇದೆ [illegible]ಹಂಸ ೬೪೦
ಗೀತವಿದೆ ಕೊನೆಯ ವಚನಂ ತಥಾಗತನಾ.

ಅಂದು ವೈಶಾಖ ಪೂರ್ಣಮಿಯ ಕುಜವಾರದಾ
ರಜನಿಯಂತಿಮ ಯಾಮದೊಳಗೆ ಸಾವೆಯ ಕಾಳು
ಬೀಳೆ ಕೇಳಿಸೆ, ಪ್ರಕೃತಿ ನಿಃಶಬ್ದ ನಿಶ್ಚೇಷ್ಟ
ನಿಷ್ಪಂದಮಿರೆ, ಶುಭ್ರ ಜ್ಯೋತಿಷ್ಮತಿಯ ಚಾರು ೬೪೫
ಚಂದ್ರಮಂ ಪಶ್ಚಿಮಾಕಾಶಕಿಳಿತಂದು, ಉ
ತ್ತರಶೀರ್ಷವಾಗಿ ಬಲವಂಕದಲಿ ಪಂಚಾಸ್ಯ
ಶಯ್ಯೆಯಲಿ ಮಲಗಿಹ ತಥಾಗತನನಭಿಮುಖಿಸಿ,
ಬೆಳದಿಂಗಳಿಂದಲಾಫಾಲಗುಲ್ಫಂ ಹೊದಿಸಿ
ಅವದಾತಕಾಯನನ್ನವದಾತತರಕರಿಸೆ, ೬೫೦
ಮಂದ್ರತಾರಂಬರಿದು ತಾರಮಂದ್ರಂ ಸರಿದು,
ಕೆಳಗಿಂದ ಮೇಲೇರಿ ಮೇಲಿಂದ ಕೆಳಗಿಳಿದು
ವಾದನಂ ಕೊನೆಗೆ ಒಯಲಲಿ ವಿಲೀನವಹಂತೆ,
ಕ್ರಮದಿಂ ತಥಾಗತಂ [illegible]ಪ್ರಥಮಂ ದ್ವಿತೀಯಂ ತೃ
ತೀಯಂ ಚತುರ್ಥಮಾ ಧ್ಯಾನವನ್ನಾ ಮೇಲೆ ೬೫೫
ವಿವಿಧಾಯತನಗಳನ್ನಲ್ಲಿಂದ[illegible] ಸಂಜ್ಞಾನಿ
ರೋಧವ[illegible] ಸಮಾಪದಿಸಲಾನಂದನನುರುದ್ಧ[illegible]
ನೊಡನಿದೊ ಭದಂತ, ಪರಿನಿರ್ವಾಣವಯ್ದಿದಂ
ಭಗವಂತನೆನಲಾತನಿಲ್ಲ ಆನಂದ, ಪರಿ
ನಿರ್ವಾಣ ಹೊಂದಿಲ್ಲ ಭಗವಂತ, ಸಂಜ್ಞಾನಿ ೬೬೦
ರೋಧವಯ್ದಿರುವನೆನಲಿತ್ತ ಭಗವಂತನಿದೊ
ಸಂಜ್ಞಾನಿರೋಧದಿಂ ಕ್ರಮದಿನವೆ ವಿವಿಧಾಯ
ತನವನಲ್ಲಿಂ ಚತುರ್ಥಂ ತೃತೀಯಂ ದ್ವಿತೀ
ಯಂ ಪ್ರಥಮಮಾ ಧ್ಯಾನಕಯ್ತಂದನಂತರಂ
ಮಗುಳೆ ದ್ವಿತೀಯಂ ತೃತೀಯಂ ಚತುರ್ಥಮಾ ೬೬೫
ಧ್ಯಾನಗಳನಂತನುಕ್ರಮದಿಂ ಸಮಾಪದಿಸಿ,
ನೀರ ಬುದ್ಬುದದಂತೆ, ಕರೆಗುರುಳ್ವ ತೆರೆಯಂತೆ,
ಉದುರ್ವ ತಾರಗೆಯಂತೆ, ಸುರಿದು ಬರಿದಹ ಮೋಡ

ದಂತೆ, ಬತ್ತಿಯುಮೆಣ್ಣೆ ಮುಗಿದ ದೀವಿಗೆಯಂತೆ,
ಕ್ಷಿತಿಜದಿಂ ಸಿಡಿದ ಮಿಂಚಂಬರದೊಳಣೆವಂತೆ ೬೭೦
ಭಗವಂತನೊಡನೆ ಪರಿನಿರ್ವಾಣವಡೆದಂ.

ಗಡಗಡನೆ ಪೊಡವಿ ನಡುಗಿತು ಪಡಿಯನೊಡವೆಯಂ
ಸೆಳೆದ ತಕ್ಕಡಿಯಂತೆ, ಮುಂಗಾರ ವಾತಾಲಿ
ಗೊಲೆವಡಕೆ ಬನದಂತೆ, ಹೇರ್ದ ನಿಲುಭಾರವಂ
ಜಗ್ಗನೊಗೆದಾ ಹಡಗಿನಂತೆ! ತಾರಾಪಥದಿ ೬೭೫
ಬಿರಿವೊಯ್ಯೆ ದೇವದುಂದುಭಿ, ಮೊಳಗಿ ಭೀಷಣಂ
ರೋಮಹರ್ಷಣಮಾಯ್ತು ಮೇಘವಿಸ್ಫೂರ್ಜಿತಂ,
ಮೇಣ್ಮುಹೂರ್ತಕೆ ವಿದ್ಯುದವಭಾಸವಾಯ್ತು, ಧಾ
ರಾಸಾರವಾಯ್ತು! ೫೦ಬ್ರಹ್ಮಂ ಸಹಂಪತಿಯಾಗ
ಳಿಂತು ಗಾಥೆಯನೊರೆದ—'ಎಂತೀದೃಶಂ ಬಲಾ ೬೮೦
ನ್ವಿತನಪ್ರತಿಮನೀ ತಥಾಗತಂ ಸಂಬುದ್ಧ
ನೀ ಶಾಸ್ತನಿಂತು ಪರಿನಿರ್ವೃತಿಸಿದನೊ ಲೋಕ
ದೊಳಗೆ ಜೀವಿಗಳೆಲ್ಲವಂತೆಯೆ ೫೧ಸಮುಚ್ಛ್ರಯಂ
ತೊರೆದು ಪೋಪರು!' ಬಳಿಕ ೫೦ದೇವೇಂದ್ರ ಶಕ್ರನೀ
ಗಾಥೆಯನ್ನುಡಿದ—೧೨'ಸಂಸ್ಕಾರವೆಲ್ಲವನಿತ್ಯ, ೬೮೫
ಉತ್ಪಾದವ್ಯಯಧರ್ಮಿಯಾಗಿ೫೨ ಹುಟ್ಟುವವಳಿವ
ವದರಿನಿದೊ ಸಂಸ್ಕಾರದುಪಶಮವೆ೫೩ ಸುಖಕರಂ!'
ಆಗಳನುರುದ್ಧನೀ ಗಾಥೆಯಿಂದಿಂತೆಂದ—
'ಸ್ಥಿತಚಿತ್ತನೀತನುಚ್ಛ್ವಾಸ ನಿಶ್ವಾಸವಂ
ಸೇದಿಲ್ಲ! ವೇದನೆಯ ಕುಗ್ಗದೆದೆಯಿಂ ತಾಳಿ ೬೯೦
ನಿರ್ವಾಣ ಶಾಂತಿಯನೆ ಗುರಿಗೊಂಡನೇಜನೀ೫೪
ಮುನಿಪ ಕಾಲಂ ಗೆಯ್ದನಿನ್ನುರಿವ ಬೊಂಬಾಳ
ನಂದುವಂತಿವನ ಚಿತ್ತವಿಮೋಕ್ಷವಾಯ್ತು!' ಕೊನೆ
ಗಾನಂದನೀ ಗಾಥೆಯಂ ಪೇಳ್ದ—'ಸರ್ವಗುಣ
ಸಂಪನ್ನ ಸಂಬುದ್ಧನಯ್ದೆ ಪರಿನಿರ್ವಾಣ ೬೯೫
ಮೊಡನೆ ಕಳವಳಿಸಿ ಮೆಯ್ಮುಳ್ಳರಳಿತೆನ್ನ!'

091760

ಭಗವಂತನಂತು ಪರಿನಿರ್ವಾಣ ಹೊಂದುವುದೆ
ನೆರೆದಿರ್ದ ಭಿಕ್ಷುವೊಳವೀತರಾಗರು ತೋಳ
ನೀಡಾಡಿ ಹೊರಳಾಡಿ, 'ಅಕಟಿನಿತು ಬೇಗ ಪರಿ
ನಿರ್ವಾಣವಯ್ದಿದನೆ ಭಗವಂತ! ಅಕಟಿನಿತು
ಬೇಗ ಪರಿನಿರ್ವೃತಿಸಿದನೆ ಸುಗತ! ಇನಿತಿತಿ
ಕ್ಷಿಪ್ರಮಂತರ್ಧಾನವಾಯ್ತೆ ಜಗದಿಂ ಜಗ
ಚ್ಚಕ್ಷುವಕಟಾ!' ಎಂದು ಗೋಳಾಡಲವರಲ್ಲಿ
ವೀತರಾಗರನಿತ್ಯವೆಲ್ಲವೀ ಸಂಸ್ಕಾರ
ವಿವು ವಿನಾಶಂ ಬಡೆಯದಿರೆ ಮೊಗ್ಗೆ? ಎಂದು ಸಂ
ತಯಿಸಿ ಕೊಳೆ, ಅನುರುದ್ಧನಿಂತೆಂದ – ಬಾಂಧವರೆ
ಸಾಕು, ಗೋಳಾಡದಿರಿ. ಪ್ರಿಯವೆಲ್ಲವಿಂದ ನಾ
ವಗಲಬೇಕೆಂದವಂ ನೀಗಬೇಕೆಂದು ಮೇ
ಣವ್ವುಗಳಿಂ ಬೇರಾಗಬೇಕೆಂದು ಮುನ್ನೆಮಗೆ
ಎನಿತೊ ಸಲ ಭಗವಂತನರುಹಲಿಲ್ಲಾ? ಬಗೆಯಿ
ಯಾವ್ರದಕೆ ಹುಟ್ಟಿದೆಯೊ ಇರವಿದೆಯೊ ಬೆಳವಿದೆಯೊ
ನಾಶಧರ್ಮಕೆ ಸಾಜದಿಂದದೀಡಾಗಿರಲು
ನಾಶವದಕಿಲ್ಲದಿರೆ ಶಕ್ಯವೇಂ ಭಿಕ್ಷುಗಳೆ?'
ಅಂತೆಂದು ಕೆಡೆದ ಮಾಮರದ ಹಕ್ಕೆಗಳಂತೆ
ಭಗವಂತನಂತಿಕದೆ ಅನುರುದ್ಧನಾನಂದ
ನವಶೇಷ ನಿಶೆಯ ಧರ್ಮಕಥಾಪ್ರಸಂಗದಲಿ
ನೂಕುತಿರಲತ್ತ ಭಗವಂತನ ಕಳೇವರದ
ಕೆಲದ **ಕಲಧೌತ *ದೀಪದ ಮಲ್ಲಿಯಂತವನ
ಕೀರ್ತಿಪ್ರಶಸ್ತಿಯ ಸ್ಫಟಿಕ *ಭೂಮಿಕೆಯಂತೆ
ರಜನಿ **ತೂಷ್ಣಿಸಲವನ ಧರ್ಮೋಪದೇಶನೆಯ
ಬಿಳಿಯ ನೆನಪಂತವನ ಮೋಕ್ಷದಾ **ಹೆರೆಯ ಹಿಂ
ಬೆಳಕಿನಂತಚಲದಲ ಶಾಂತಿ*° ದೆಸೆದೀವೆ, ತಾ
ರಾಸಿಚಯಮಶ್ರಾವ್ಯ ಸಂಗೀತವಾಚರಿಸೆ,
ಪಶ್ಚಿಮ ನಿರಭ್ರ ನಭದಲಿ ದಿಗಂತಕೆ ಮೆಲ್ಲ
ಮೆಲ್ಲನವತರಿಸುತಿರ್ದಂ ಸುಧಾಕಿರಣಂ.

ಟಿಪ್ಪಣಿ

ವೈಶಾಖಿ = ವೈಶಾಖ ಪೂರ್ಣಮಿ.

೧ ಆನಂದನು ಬುದ್ಧನ ಚಿಕ್ಕಪ್ಪನಾದ ಅಮಿತೋದನನ ಮಗ, ಹಾಗೂ ಬುದ್ಧನ ಅಕ್ಕರೆಯ ಶಿಷ್ಯ.

೨ ಬುದ್ಧನ ಕಾಲದಲ್ಲಿ 'ಸೋಳಸ ಮಹಾಜನಪದ'ಗಳೆಂದು ಪ್ರಸಿದ್ಧವಾಗಿದ್ದ ಉತ್ತರಾಪಥದ ೧೬ ದೇಶಗಳಲ್ಲಿ ಒಂದಾದ ಮಲ್ಲರ ಗಣರಾಜ್ಯವು (republic) ಇಬ್ಭಾಗವಾಗಿ ಒಂದರ ರಾಜಧಾನಿ ಪಾವೆಯೂ, ಮತ್ತೊಂದರದು (ಸಂಸ್ಕೃತ) ಕುಶಾವತಿ ಅಥವಾ ಕುಶಿನಗರ ಎಂಬ (ಪಾಲಿ) ಕುಶಿನಾರ ಅಥವಾ ಕುಶಿನರವೂ ಆಗಿತ್ತು. ಪಾವೆಯಿಂದ ಕುಶಿನಾರಕ್ಕೆ ಹೆಚ್ಚು ಕಡಿಮೆ ೧೨ ಮೈಲು. ಪಾವೆ ಎಂದರೆ ಈಗಣ ಪಡರವಣಾ (Padraona); ಕುಶಿನಾರ ಎಂದರೆ ಗೋರಖಪುರದಿಂದ ೩೭ ಮೈಲು ದೂರದಲ್ಲಿರುವ ಈಗಣ ಕಸಯಾ (Kasia). ಕುಶಿನಾರವು ಅಜಿತವತಿಯೂ ಎಂಬ ಹಿರಣ್ಯವತೀ ನದಿಯ ದಂಡೆಯಲ್ಲಿದೆ.

೩ ಅಮಿತಾಭ, ಭಗವಂತ, ತಥಾಗತ, ಸುಗತ, ಗೌತಮ, ಶಾಸ್ತ — ಇವೆಲ್ಲವೂ ಬುದ್ಧನ ಪರ್ಯಾಯನಾಮಗಳು. ೯—೧೦ನೆಯ ಬಂತಿಗಳಲ್ಲಿ 'ತಥಾಗತರೆ' ಎಂದು ಬಹುವಚನಿಸಿರುವಲ್ಲಿ ಬುದ್ಧನು ತನ್ನನ್ನೂ ತನ್ನ ಹಿಂದಣ ಹಾಗೂ ಮುಂದಣ ಬುದ್ಧರನ್ನೂ ಕುರಿತಿರುತ್ತಾನೆ.

೪ ಸೂಕರ ಮದ್ದವ ಎಂದರೆ ಕಾಡುಹಂದಿಯ ಒಣಮಾಂಸ (dried boar's flesh) ಎಂದು ಬಗೆಯಲ್ಪಟ್ಟಿತ್ತಾದರೂ, ಈಚೀಚೆ ಅದು ಮಾಂಸವೇ ಅಲ್ಲ, ಒಂದು ಬಗೆಯ ಅಣಬೆ (fungus), ಅತಏವ ಶಾಕ ಎಂದು ಗೊತ್ತಾಗಿದೆ. (Annals of the Bhandarkar Oriental Research Institute, Silver Jubilee Volume, 1942, pp. 127—133).

೫ ಗಯಾ ಕ್ಷೇತ್ರದ ಬಳಿಯಲ್ಲಿ ಹರಿಯುತ್ತಿರುವ ಫಲ್ಗು ನದಿಯ ಮೇಲ್ಭಾಗದ ಹೆಸರು (ಪಾಲಿ) ನೇರಂಜರೆ = (ಸಂ.) ನಿರಂಜನಾ ಎಂದು. ಅದರ ತಡಿಯಣ (ಪಾ.) ಉರುವೇಲೆ = (ಸಂ.) ಉರುವಿಲ್ವ ಎಂಬ ಈಗಣ ಬುದ್ಧಗಯೆಯಲ್ಲಿಯ ಒಂದು ಅಶ್ವತ್ಥ ವೃಕ್ಷದ ಬುಡದಲ್ಲಿ ಬುದ್ಧನು ಸಂಬೋಧಿ ಜ್ಞಾನವನ್ನು ಪಡೆದು ಬುದ್ಧನಾದ ೭ ದಿನಗಳ ವರೆಗೆ ಆತನು ಅಲ್ಲಿಯೇ ಉಳಿದಿದ್ದು ಆ ಮೇಲೆ ಒಂದು ನ್ಯಗ್ರೋಧವೃಕ್ಷ (ಅಲದ ಮರ)ದ ಬುಡಕ್ಕೆ ಹೋಗಿ ಅಲ್ಲಿ ೭ ದಿನ ಉಳಕೊಂಡನು.

೬ ಮಾರ ಎಂದರೆ ಬೌದ್ಧಧರ್ಮದ ಪಾಪಪುರುಷ, ಅಥವಾ ಮನಸ್ಸಿನ ವಾಸನೆಗಳ ಮೂರ್ತಿವಂತನಾದ ವ್ಯಕ್ತಿ. ಬುದ್ಧನು ಬೋಧಿಜ್ಞಾನ ಪಡೆಯುತ್ತಲೆ ಆತನಿಗೂ ಮಾರನಿಗೂ ಆದ ಮಾತುಕತೆಯನ್ನು ಬೌದ್ಧಧರ್ಮಗ್ರಂಥವಾದ ಸುತ್ತನಿಪಾತದ ಪಧಾನ ಸುತ್ತದಲ್ಲಿಯೂ, ಬುದ್ಧನ ಪರಿನಿರ್ವಾಣಕ್ಕೆ ೩ ತಿಂಗಳ ಹಿಂದೆ ಆತನಿಗೂ ಮಾರನಿಗೂ ವೈಶಾಲಿಯಲ್ಲಿ ಆದ ಮಾತುಕತೆಯನ್ನು ಮಹಾಪರಿನಿಬ್ಬಾನ ಸುತ್ತದಲ್ಲಿಯೂ ವರ್ಣಿಸಿದೆ.

೬ ಪರಿನಿರ್ವೃತಿಸು = ಪರಿನಿರ್ವಾಣ ಹೊಂದು.

೮ ವೈಶಾಲಿ ಎಂದರೆ ಸೋಳಸ ಮಹಾ ಜನಪದ'ಗಳಲ್ಲಿ ಮತ್ತೊಂದಾದ ಲಿಚ್ಛವಿ ಎಂಬ ಜನರ ವಜ್ಜೀ ರಾಜ್ಯದ ರಾಜಧಾನಿ. ಅದು ಈಗಣ ಮುಜಾಫರಪುರ (ತ್ರಿ ಹೋತ್ರ) ಜಿಲ್ಲೆಯಲ್ಲಿಯ ಬೇಸಾಡ. ಚಾಪಾಲ ಚೈತ್ಯ ಎಂದು ಅಲ್ಲಿದ್ದ ಒಂದು ವಿಹಾರದ ಹೆಸರು.

೯ ಬುದ್ಧನು ಹುಟ್ಟಿದುದು ಕ್ರಿ. ಪೂ. ೫೮೦ನೆಯ ಏಪ್ರಿಲ್ ೯ನೆಯ ತಾರೀಕು ಶುಕ್ರ ವಾರ ವೈಶಾಖ ಹುಣ್ಣಿಮೆಯಂದು, ಪರಿನಿರ್ವಾಣ ಹೊಂದಿದುದು ಕ್ರಿ. ಪೂ. ೫೦೦ನೆಯ ಏಪ್ರಿಲ್ ೧೫ನೆಯ ತಾರೀಕು ಶುಕ್ರವಾರ ವೈಶಾಖ ಹುಣ್ಣಿಮೆಯಂದು. ಹೀಗೆ ಚಾಂದ್ರ ಮಾನ ಗಣನದ ಮೇರೆಗೆ ಅತನ ಆಯುಸ್ಸು ಭರ್ತಿ ೮೦ ವರ್ಷ.

೧೦ ನಿರೋಧ ಸಮಾಧಿ ಎಂದರೆ ಬಾಹ್ಯವಸ್ತುವಾವುದನ್ನೂ ಗಮನಿಸದೆ ಮನಸ್ಸನ್ನು ನಿರೋಧಿಸಿ ಧ್ಯಾನದಲ್ಲಿ ಮಗ್ನನಾಗಿರುವಿಕೆ (Withdrawing attention from all externals and entering on and abiding in the objectless concentration of mind).

೧೧ ಶೀಲ = ಸದಾಚಾರ; ಸಮಾಧಿ = ಧ್ಯಾನ; ಪ್ರಜ್ಞೆ = ಜ್ಞಾನ; ವಿಮುಕ್ತಿ = ಮೋಕ್ಷ.

೧೨ ಸಂಸ್ಕಾರ = ಭೂತಸೃಷ್ಟಿ, ಜೀವಜಂತುಗಳು; ವ್ಯಯಧರ್ಮ = ಕ್ಷಯಶೀಲ, ನಾಶವಂತ.

೧೩ ನಾಗಾವಲೋಕಿಸುತ = ಆನೆಯಂತೆ ಮುಂದರಿಸುತ್ತಿರುವಂತೆ ಹಿಂದಕ್ಕೆ ನೋಡುತ್ತ.

೧೪ ಕೇಳಿ = ಸಾಲು, ಸಮೂಹ.

೧೫ (ಪಾ.) ಕಕುತ್ಥಾನದಿ = (ಸಂ.) ಕಕುತ್ಸ್ಥ ನದಿ ಎಂದರೆ ಕುಶಿನಾರದಿಂದ ೮ ಮೈಲು ದೂರದಲ್ಲಿ ಹರಿಯುತ್ತಿರುವ ಚಿಕ್ಕದೊಂದು ಹೊಳೆ.

೧೬ ಬೌದ್ಧಗ್ರಂಥಗಳಲ್ಲಿ ಬುದ್ಧನನ್ನು ಕುರಿತು ಆಯಾ ಸಂದರ್ಭಗಳಲ್ಲಿ ಹೆಚ್ಚಾಗಿ ಹೀಗದೆ—'ಅರಹಂ, ಸಮ್ಮಾಸಂಬುದ್ಧೋ, ವಿಜ್ಜಾಚರಣ ಸಂಪನ್ನೋ, ಸುಗತೋ, ಲೋಕವಿದೂ, ಅನುತ್ತರೋ, ಪುರಿಸದಮ್ಮ ಸಾರಥೀ, ಸತ್ಥಾ ದೇವಮನುಸ್ಸಾನಂ, ಬುದ್ಧೋ, ಭಗವಾ' = ಅರ್ಹಂತನು, ಸಮ್ಯಕ್ಸಂಬುದ್ಧನು, ವಿದ್ಯಾಚರಣ ಸಂಪನ್ನನು, ಸುಗತನು, ಲೋಕವೇತ್ತನು, ಅನುತ್ತರನು (ಅಂದರೆ ಎಲ್ಲರನ್ನು ಮೀರಿದವನು), ಪುರುಷದಮ್ಯಸಾರಥಿ (ಅಂದರೆ ದಾರಿತಪ್ಪಿ ನಡೆಯುವವರ ಹೃದಯಗಳನ್ನು ಹಿಂದಕ್ಕೆ ಎಳಕೊಂಡು ಸಾರಥಿಯಂತೆ ನಡಸುವಾತನು, ಅಥವಾ ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡಸಬಲ್ಲವನು), ದೇವತೆಗಳ ಹಾಗೂ ಮನುಷ್ಯರ ಗುರು, ಬುದ್ಧನು, ಭಗವಂತನು.

೧೭ ಇಲ್ಲಿ (ಬಂತಿ ೧೭ಳರಿಂದ ೨೦ಳರ ವರೆಗೆ) ಬೌದ್ಧ ಧರ್ಮಗ್ರಂಥವಾದ ಸುತ್ತ ನಿಪಾತದ ಮಹಾಮಂಗಲಸುತ್ತವನ್ನು ಬುದ್ಧನಿಂದ ಪುಕ್ಕುಸನಿಗೆ ಉಪದೇಶ ಮಾಡಿಸಿದೆ. ಮಹಾಪರಿನಿಬ್ಬಾನಸುತ್ತದ ಈ ಎಡೆಯಲ್ಲಿ ಈ ಉಪದೇಶವಿಲ್ಲ.

೧೮ ಈ ನಾಲ್ಕು ಆರ್ಯಸತ್ಯಗಳನ್ನು ಈ ಕಾವ್ಯದಲ್ಲಿ ಮುಂದೆ ೫೫ಲ – ೫೭ನೆಯ ಬಂತಿಗಳಲ್ಲಿ ವಿವರಿಸಿದೆ.

೧೯ ನಿರ್ವಾಣದಪರೋಕ್ಷಾನುಭವ = ನಿರ್ವಾಣವನ್ನು ಸಾಕ್ಷಾತ್ಕರಿಸಿಕೊಳ್ಳುವಿಕೆ.

೨೦ ನಿರುಪಧಿಶೇಷ ನಿರ್ವಾಣ (ಪಾ.) = (ಸಂ. ನಿರುಪಾಧಿಶೇಷ ನಿರ್ವಾಣ) ಏನನ್ನೂ ಹಿಂದುಳಿಸದೆ ನಂದಿಹೋಗುವಿಕೆ (utter passing away leaving nothing whatever to remain), ಅಂದರೆ ಪರಿನಿರ್ವಾಣ.

೨೧ ಕಾಲಿನ ಮೇಲೆ ಕಾಲಿಕ್ಕಿ ಮಾಡುವ ಶಯನಕ್ಕೆ ಸಿಂಹಶಯ್ಯೆ ಎನ್ನುತ್ತಾರೆ.

೨೨ ಪಿಂಡಪಾತ = ಭಿಕ್ಷಾಪಾತ್ರದಲ್ಲಿ ದೊರೆತ ಅನ್ನ.

೨೩ ಉದಾನ = ಸಂತೋಷದಿಂದ ಮನ ಉಕ್ಕಿ ಹಾಡುವ ಹಾಡು; ಉದಾನಿಸಿದ = ಹರ್ಷಗೀತವನ್ನು ಹಾಡಿದನು.

೨೪ ಧರ್ಮಾನುಧರ್ಮ = ಗುರುತರವೂ ಲಘುತರವೂ ಆದ ಧರ್ಮ (= ಕರ್ತವ್ಯ)ಗಳು.

೨೫ ಬುದ್ಧನು ಹುಟ್ಟಿದುದು ತನ್ನ ತಂದೆ ಶುದ್ಧೋದನನ ರಾಜಧಾನಿಯಾಗಿದ್ದ ಕಪಿಲವಸ್ತುವಿನ ಬಳಿಯ ಲುಂಬಿನೀವನದಲ್ಲಿ (ಇದೀಗ ನೇಪಾಲದ ತರಾಯಿಯಲ್ಲಿ ಭಗವಾನಪುರದಿಂದ ೨ ಮೈಲು ದೂರದಲ್ಲಿರುವ ರುಮ್ಮಿಂದೈ, Rummendei, ಎಂಬ ಹಳ್ಳಿ); ಆತನು ಸಂಬೋಧಿ ಜ್ಞಾನವನ್ನು ಹೊಂದಿ ಬುದ್ಧನಾದುದು (ಬಂ. ೧೩ ಟಿಪ್ಪಣಿ ೫) ಗಯೆಯಿಂದ ೭ ಮೈಲು ದೂರದಲ್ಲಿರುವ ಉರುವೇಲೆ ಎಂಬ ಈಗಣ ಬುದ್ಧಗಯೆಯಲ್ಲಿ; ಆತನು ಮೊತ್ತಮೊದಲಲ್ಲಿ ತನ್ನ ಧರ್ಮಚಕ್ರವನ್ನು ಪ್ರವರ್ತಿಸಿದುದು, ಅಂದರೆ ತನ್ನ ಧರ್ಮವನ್ನು ಪ್ರಥಮತಃ ಸಾರಿದುದು, ವಾರಣಾಸಿ (= ಕಾಶಿ)ಯ ಬಳಿಯ ಋಷಿಪತ್ತನವೂ ಮೃಗದಾವವೂ ಎಂಬ ಈಗಣ ಸಾರನಾಥದಲ್ಲಿ; ಆತನು ಪರಿನಿರ್ವಾಣ ಹೊಂದಿದುದು ಕುಶಿನಾರದ (ಸಾಲವನದ)ಲ್ಲಿ.

೨೬ ಚಾರಿಕ = ಯಾತ್ರೆ.

೨೭ ಕಪಿಶೀರ್ಷ = ಬಾಗಿಲಿನ ಮೇಲಣ ಹಾಸುಮರ. ದ್ವಾರೋರ್ಧ್ವದಾರು.

೨೮ ಪತ್ತ-ಚೀವರ = ಭಿಕ್ಷಾಪಾತ್ರ (ಪತ್ತ = ಸಂ. ಪಾತ್ರ) ಮತ್ತು ಭಿಕ್ಷುವಿನ (ಕಾವಿಯ) ಶಾಟಿ (ಚೀವರ).

೨೯ ಅನಾಸ್ರವ = ನಿಷ್ಪಾಪ, ಅನಘ, ವೀತರಾಗ.

೩೦ 'ಸೋಳಸ ಮಹಾಜನಪದ'ಗಳಲ್ಲಿಯ (ಮಹಾಭಾರತದ ಕರ್ಣನ ರಾಜ್ಯ

ವಾಗಿದ್ದ) ಅಂಗದೇಶದ ರಾಜಧಾನಿಯಾದ ಚಂಪೆ, ಅಂದರೆ ಈಗಣ ಭಗಲಪುರದಿಂದ ೪ ಮೈಲು ದೂರದಲ್ಲಿರುವ ಚಂಪಾನಗರ; ಮಗಧದೇಶದ ರಾಜಧಾನಿಯಾದ ರಾಜಗೃಹ ಅಂದರೆ ಈಗ ಬಿಹಾರದಲ್ಲಿರುವ ರಾಜಗಿರ (ಇದೇ ಮಹಾಭಾರತದಲ್ಲಿ ಜರಾಸಂಧನ ರಾಜಧಾನಿ ಎಂದಿರುವ ಗಿರಿವ್ರಜ); ಕೋಸಲ ದೇಶದ ರಾಜಧಾನಿಯಾದ ಶ್ರಾವಸ್ತಿ, ಅಂದರೆ ಅಯೋಧ್ಯೆಯಿಂದ ೫೮ ಮೈಲು ದೂರದಲ್ಲಿರುವ ಈಗಣ ಸಾಹೇತ-ಮಾಹೇತ; ಕೋಸಲದೇಶದಲ್ಲಿಯದೇ ಮತ್ತೊಂದು ನಗರವಾದ ಸಾಕೇತ ಅಂದರೆ ಈಗಣ ಅಯೋಧ್ಯೆ; ವತ್ಸದೇಶದ ರಾಜಧಾನಿಯಾದ ಕೌಶಾಂಬಿ, ಅಂದರೆ ಪ್ರಯಾಗದಿಂದ ೩೦ ಮೈಲು ದೂರದಲ್ಲಿರುವ ಈಗಣ ಕೋಸಂ ಅಥವಾ ಕೋಸಂಬಿ ನಗರ; ಕಾಶೀ ದೇಶದ ರಾಜಧಾನಿಯಾದ ವಾರಣಾಸಿ ಅಂದರೆ ಈಗಣ ಕಾಶಿ.

೩೧ ಮಹಾಸುದರ್ಶನನೆಂಬ ಚಕ್ರವರ್ತಿಯನ್ನು ಕುರಿತು ಬೌದ್ಧರ ದೀಘನಿಕಾಯದ ಮಹಾಸುದಸ್ಸನ ಸುತ್ತದಲ್ಲಿ ವಿಸ್ತಾರವಾಗಿ ಹೇಳಿದೆ, ಹಾಗೂ ಬುದ್ಧನು ತನ್ನ ದೊಂದು ಪೂರ್ವಜನ್ಮದಲ್ಲಿ ಆ ಚಕ್ರವರ್ತಿಯಾಗಿದ್ದನೆಂದು ಮಹಾಸುದಸ್ಸನ ಜಾತಕದಲ್ಲಿ ಹೇಳಿದೆ.

೩೨ ಯಕ್ಷರಾಜನಾದ ಕುಬೇರನ ರಾಜಧಾನಿಯಾಗಿ ಯಕ್ಷಧಾನಿ ಎನಿಸುವ ಅಳಕಾವತಿಯನ್ನು ಬೌದ್ಧಸಾಹಿತ್ಯದಲ್ಲಿ ಅಳಕಮಂದ ಎನ್ನುತ್ತಾರೆ.

೩೩ ಸಂಸ್ಥಾಗಾರ= ಸಭಾಗೃಹ, ನಗರಭವನ.

೩೪ ಈ ಮಲ್ಲರನ್ನು 'ವಾಸಿಷ್ಠರೆ' ಎಂದು ಸಂಬೋಧಿಸಿರುವುದರಿಂದ, ಅವರು ವಸಿಷ್ಠ ಗೋತ್ರದವರೆಂದು, ಅತಏವ ಕ್ಷತ್ರಿಯರೆಂದು ತಿಳಿಯುತ್ತದೆ.

೩೫ ಬುದ್ಧನು ಆದಿತ್ಯಗೋತ್ರದವನು, ಅಂದರೆ ಸೂರ್ಯವಂಶೋತ್ಪನ್ನನು ಎಂಬ ಕಾರಣ ಅತನಿಗೆ ಅರ್ಕಬಂಧು ಎಂದು ಹೆಸರಿದೆ; ಉದಾ—

(೧) ಮಗಧ ದೇಶದ ಅರಸನಾದ ಬಿಂಬಿಸಾರನೊಡನೆ ಬುದ್ಧನು ತನ್ನನ್ನು ಕುರಿತು ಹೀಗೆನ್ನುತ್ತಾನೆ (ಸುತ್ತನಿಪಾತದ ಪಬ್ಬಜ್ಜಾಸುತ್ತ)—

ಅದಿಚ್ಚಾ ನಾಮು ಗೊತ್ತೇನ ಸಾಕಿಯಾ ನಾಮು ಜಾತಿಯಾ ।
ತಮ್ಹಾ ಕುಲಾ ಪಬ್ಬಜಿತೋ (ಽಮ್ಹಿ ರಾಜ) ನ ಕಾಮೇ ಅಭಿಪತ್ಥಯಂ ॥ ೧೯ ॥

ಅಂದರೆ ಎಲೈ ಅರಸನೆ, ಆದಿತ್ಯ ಗೋತ್ರದವರೂ ಜಾತಿಯಿಂದ ಶಾಕ್ಯರೂ ಆದವರ ಕುಲದಿಂದ ಕಾಮೋಪಭೋಗದ ಇಚ್ಛೆಯನ್ನು ನೀಗಿ ನಾನು ಪರಿವ್ರಾಜಕನಾಗಿರುತ್ತೇನೆ.

(೨) ಅಶ್ವಘೋಷನ 'ಬುದ್ಧಚರಿತ'ದಲ್ಲಿ (ಸರ್ಗ ೧) ಬುದ್ಧನ ತಂದೆಯಾದ ಶುದ್ಧೋದನನನ್ನು 'ಅರ್ಕಬಂಧು' ಎಂದದೆ—

ಶುದ್ಧೋದನೋ ನಾಮ ನೃಪೋಽರ್ಕಬಂಧುಃ ॥ ೯ ॥

(೩) ಅಮರ ಕೋಶದಲ್ಲಿ (I. ೧) ಬುದ್ಧನನ್ನು 'ಅರ್ಕಬಂಧು' ಎಂದದೆ—

ಸ ಶಾಕ್ಯಸಿಂಹಃ ಸರ್ವಾರ್ಥಸಿದ್ಧಃ ಶೌದ್ಧೋದನಿಶ್ಚ ಸಃ ।
ಗೌತಮಶ್ಚಾರ್ಕಬಂಧುಶ್ಚ ಮಾಯಾದೇವೀಸುತಶ್ಚ ಸಃ ॥ ೧೫ ॥

೩೬ ಇಲ್ಲಿ ೪೪೭ರಿಂದ ೪೯೧ರ ವರೆಗಣ ಬಂತಿಗಳಲ್ಲಿ (೪೭೪ರಿಂದ ೪೪೭ರ ವರೆಗಳ ಬಂತಿಗಳು ವಿನಾ) ಬೌದ್ಧಸಾಹಿತ್ಯದ ಧಮ್ಮಪದವೇ ಮೊದಲಾದ ಗ್ರಂಥಗಳಿಂದ ಆಯ್ದು ಕೊಂಡ ಸೂಕ್ತಗಳನ್ನು ಬುದ್ಧನಿಂದ ಈ ಮಲ್ಲರಿಗೆ ಉಪದೇಶ ಮಾಡಿಸಿದೆ. ಮಹಾಪರಿನಿಬ್ಬಾನ ಸುತ್ತದಲ್ಲಿ ಈ ಎಡೆಯಲ್ಲಿ ಈ ಮಾತುಗಳಿಲ್ಲ.

೩೭ ಬಂ, ೪೪೫—೪೪೬: To every action there is an equal and opposite reaction.

೩೮ (೧) ಪೂರ್ಣಕಶ್ಯಪ, (೨) ಮಸ್ಕರೀ ಗೋಶಾಲ, (೩) ಅಜಿತ ಕೇಶಕಂಬಲಿ, (೪) ಪಕುಧ ಕಾತ್ಯಾಯನ, (೫) ಬೇಲಟ್ಠೀಪುತ್ರ ಸಂಜಯ ಹಾಗೂ (೬) ನಿರ್ಗ್ರಂಥ ಜ್ಞಾತಪುತ್ರ ಎಂಬ ಈ ಆರುವರು ಹೆಚ್ಚುಕಡಿಮೆ ಬುದ್ಧನ ಸಮಕಾಲದಲ್ಲಿ ಪ್ರಸಿದ್ಧರಾಗಿದ್ದ ತೀರ್ಥ(೦)ಕರರು, ಅಂದರೆ ಆಯಾ ಧರ್ಮಬೋಧಕರು. ಇವರಲ್ಲಿ ನಿರ್ಗ್ರಂಥ ಜ್ಞಾತಪುತ್ರನೆಂದರೆ ಜೈನರ ೨೪ನೆಯ ತೀರ್ಥಂಕರನಾದ ವರ್ಧಮಾನ-ಮಹಾವೀರ. ಬೌದ್ಧಗ್ರಂಥಗಳಲ್ಲಿ ಇವರನ್ನು ಹೆಸರಿಸಿರುವಲ್ಲಿ ಇವರನ್ನು ಕುರಿತು ಹೀಗೆಂದದೆ—'ಸಮಣ ಬ್ರಾಹ್ಮಣಾ, ಸಂಘಿನೋ, ಗಣಿನೋ, ಗಣಾಚಾರಿಯಾ. ಞಾತಾ, ಯಸಸ್ಸಿನೋ, ತಿತ್ಥಕರಾ, ಸಾಧುಸಮ್ಮತಾ ಬಹುಜನಸ್ಸ'=ಶ್ರಮಣ(ರಾಗಿ) ಬ್ರಾಹ್ಮಣ(ರಾದವರು, ಸಂಘದಿಂದ ಒಡಗೂಡಿದವರು, ಗಣದಿಂದ ಒಡಗೂಡಿದವರು, ಗಣಾಚಾರ್ಯರು, ಲೋಕವಿಜ್ಞಾತರು, ಯಶಸ್ವಿಗಳು, ತೀರ್ಥ(೦)ಕರರು. ಸಾಧುಗಳೆಂದು ಬಹುಜನರಿಂದ ಸಮ್ಮತಿಸಲ್ಪಟ್ಟವರು.

೩೯ ಭದಂತ ಎಂಬುದು ಬೌದ್ಧ ಶ್ರಮಣರನ್ನು ಸಂಬೋಧಿಸುವಲ್ಲಿ ಉಪಯೋಗಿಸುವ ಸಂಬೋಧನಪದ.

೪೦ ಇಲ್ಲಿ ೫೪೭ರಿಂದ ೫೭೫ರ ವರೆಗಣ ಬಂತಿಗಳಲ್ಲಿ ಅಂಗುತ್ತರ ನಿಕಾಯದ ಧಮ್ಮಚಕ್ಕಪ್ಪವತ್ತನ (ಧರ್ಮಚಕ್ರಪ್ರವರ್ತನ) ಸುತ್ತವನ್ನು ಸಂಗ್ರಹಿಸಿ ಬುದ್ಧನಿಂದ ಸುಭದ್ರನಿಗೆ ಬೋಧಿಸಿಯದೆ. ಮಹಾಪರಿನಿಬ್ಬಾನ ಸುತ್ತದಲ್ಲಿ ಈ ಎಡೆಯಲ್ಲಿ ಈ ಭಾಗವಿಲ್ಲ.

೪೧ ಉಪಶಮ=ಚಿತ್ತನಿರ್ವೃತ್ತಿ; ಅಭಿಜ್ಞೆ=ಉಚ್ಚವಾದ ಪ್ರಜ್ಞೆ; ಸಂಬೋಧ=ಪರಮ ಪ್ರಬೋಧನ (ಕೇವಲ ಜ್ಞಾನ); ನಿರ್ವಾಣ=ವಿಮುಕ್ತಿ.

೪೨ (೧) ಸಮ್ಯಗ್ದೃಷ್ಟಿ=ನೇರಾದ ಕಾಣಕೆ ಅಥವಾ ನೇರಾದ ನಂಬುಗೆ (Right view, or right belief); (೨) ಸಮ್ಯಕ್ಸಂಕಲ್ಪ=ನೇರಾದ ಬಗೆತ (Right resolve); (೩) ಸಮ್ಯಗ್ವಚನ=ನೇರಾದ ನುಡಿತ (Right speech); (೪) ಸಮ್ಯಕ್ಕರ್ಮ=ನೇರಾದ ನಡೆತ (Right conduct); (೫) ಸಮ್ಯಗಾಜೀವ=ನೇರಾದ ಬದುಕು (Right livelihood); (೬) ಸಮ್ಯಗ್ವ್ಯಾಯಾಮ=ನೇರಾದ ದುಡಿತ (Right effort); (೭) ಸಮ್ಯಕ್ಸ್ಮೃತಿ=ನೇರಾದ ಎಚ್ಚರಿಕೆ ಅಥವಾ ನೇರಾದ ನೆನವರಿಕೆ (Right mindfulness, or right recollection); ಮತ್ತು (೮) ಸಮ್ಯಕ್ಸಮಾಧಿ=ನೇರಾದ ಧ್ಯಾನ (Right contemplation). ಇವು ಆರ್ಯ ಅಷ್ಟಾಂಗಿಕ ಮಾರ್ಗದ ಎಂಟು ಅಂಗಗಳು.

೪೩ ಅನ್ಯತೀರ್ಥಕ = ಇತರ ಧರ್ಮದ ಅನುಯಾಯಿ, ಪರಸಮಯಿ.

೪೪ ಸ್ರೋತಾಪನ್ನ = ಹಳ್ಳದಲ್ಲಿ ಇಳಿದವನು, ಅಂದರೆ ನಿರ್ವಾಣ ಮಾರ್ಗದ ನಾಲ್ಕು ಮೆಟ್ಟಿಲಲ್ಲಿ ಮೊದಲನೆಯದನ್ನು ದಾಟಿದವನು.

೪೫ ಹಂಸಗೀತ = ಕೊನೆಯ ಹಾಡು (swan-song).

೪೬ ಪ್ರಥಮ ಧ್ಯಾನ, ದ್ವಿತೀಯ ಧ್ಯಾನ, ತೃತೀಯ ಧ್ಯಾನ ಹಾಗೂ ಚತುರ್ಥ ಧ್ಯಾನ ಎಂಬವು ಸಮಾಧಿಯಲ್ಲಿ ಒಂದಕ್ಕಿಂತ ಒಂದು ಮೇಲಾದ ೪ ಸೋಪಾನಗಳು.

೪೭ ವಿವಿಧಾಯತನಗಳೆಂದರೆ ಅನುಕ್ರಮವಾಗಿ ಸಮಾಧಿಯ ಈ ೪ ಅವಸ್ಥೆಗಳು — (೧) ಅನಂತ್ಯವಾದ ಆಕಾಶದ ಆಯತನ = ಮನಸ್ಸಿಗೆ ಅನಂತವಾದ ಆಂತರಿಕ್ಷ ಮಾತ್ರವೇ ಇದ್ದಿರುವಂತೆ ಬೋಧೆಯಾಗುವ ಅವಸ್ಥೆ (the state of mind to which the infinity of space is alone present; the abode of infinity of space); (೨) ಅನಂತ್ಯವಾದ ವಿಜ್ಞಾನದ ಆಯತನ = ಮನಸ್ಸಿಗೆ ಅನಂತವಾದ ಚೇತನ ಮಾತ್ರವೇ ಬೋಧೆಯಾಗುವ ಅವಸ್ಥೆ (the state of mind to which the infinity of thought is alone present; the abode of infinity of consciousness); (೩) ಅನಂತ್ಯವಾದ ಆಕಿಂಚನ್ಯದ ಆಯತನ = ಮನಸ್ಸಿಗೆ ಏನೂ ಇಲ್ಲದಿರುವಂತೆ ಬೋಧೆಯಾಗುವ, ಅಂದರೆ ಮನಸ್ಸು ವೃತ್ತಿಶೂನ್ಯವಾಗುವ ಅವಸ್ಥೆ (the state of mind to which nothing at all is specially present; the abode of nothingness); (೪) ನೈವಸಂಜ್ಞಿಯ ನಾಸಂಜ್ಞಿಯ ಆಯತನ = ಚೇತನಾಚೇತನಗಳ ನಡುವಣ ಮಾನಸಿಕ ಅವಸ್ಥೆ, ಇದು ಸಮಾಧಿಯ ಕೊನೆಯ ಮೆಟ್ಟಿಲು (the state between consciousness and unconsciousness, or betwem perception and non-perception).

೪೮ ಸಂಜ್ಞಾನಿರೋಧ = ಭಾವನೆಯ ಹಾಗೂ ಚೇತನೆ(ಸಂಜ್ಞೆ)ಯ ಜ್ಞಾನ ತೀರ ಅಳಿದು ಹೋದ ಮಾನಸಿಕ ಅವಸ್ಥೆ (a state in which the consciousness both of sensations and of ideas had wholly passed away).

೪೯ ಅನುರುದ್ಧನು ಬುದ್ಧನ ಮತ್ತೊಬ್ಬ ಕಕ್ಕನಾದ ಶುಕ್ಲೋದನನ ಮಗ. ಅವನೂ ಭಿಕ್ಷುವಾಗಿದ್ದನು.

೫೦ ಸನಾತನ ಧರ್ಮದ ಬ್ರಹ್ಮನನ್ನು ಬ್ರಹ್ಮ ಸಹಂಪತಿ ಎಂದೂ ದೇವೇಂದ್ರನನ್ನು ದೇವೇಂದ್ರ ಶಕ್ರನೆಂದೂ ಬೌದ್ಧಸಾಹಿತ್ಯದಲ್ಲಿ ಅಲ್ಲಲ್ಲಿ ಉಲ್ಲೇಖಿಸಿದೆ.

೫೧ ಸಮುಚ್ಛ್ರಯ = ಪ್ರತ್ಯೇಕ ಜೀವಿಯ ಅಸ್ತಿತ್ವ, ರೂಪ, ದೇಹ.

೫೨ ಉತ್ಪಾದವ್ಯಯಧರ್ಮಿಯಾಗಿ = ಜನನ-ಮರಣಗಳಿಗೆ ಈಡಾಗಿ (ಉತ್ಪಾದ = ಜನನ; ವ್ಯಯ = ಮರಣ).

೫೩ ಉಪಶಮ = ಕೊನೆವರಿಸುವಿಕೆ; ಸಂಸ್ಕಾರದ ಉಪಶಮ = ಜೀವಿತದ ವಿರಾಮ, ಬದುಕಿನ ಕೊನೆವರಿಕೆ (cessation of existence).

೫೪ ಅನೇಜ = ಅನೀಹಮಾನ, ನಿಷ್ಕಾಮ.

೫೫ ಕಲಧೌತ = ಬೆಳ್ಳಿ.

೫೬ ದೀಪದ ಮಲ್ಲಿ = ಕೆಯ್ಗಳಲ್ಲಿ ದೀಪಪಾತ್ರವನ್ನು ಹಿಡಿದಿರುವ (ಹೆಚ್ಚಾಗಿ ದೇವಾಲಯಗಳಲ್ಲಿರುವ) ಲೋಹದ ಅಥವಾ ಕಲ್ಲಿನ ಸ್ತ್ರೀ ಮೂರ್ತಿ.

೫೭ ಭೂವಿಕೆ = ಶಾಸನ ಮುಂತಾದುವನ್ನು ಕೆತ್ತುವ ಶಿಲಾಫಲಕ.

೫೮ ತೂಷ್ಣಿಸು = ಮೌನವಾಗಿರು.

೫೯ ಹೆರೆಯ ಹಿಂಬೆಳಕು = ಚಂದ್ರನು ಅಸ್ತಮಿಸುತ್ತಲೆ ಆಕಾಶದಲ್ಲಿ ತೋರುವ ಬೆಳಕು.

೬೦ ಅಚಲದಲ ಶಾಂತಿ = ಒಂದು ಎಲೆಯಾದರೂ ಕದಲದಂಥಾ ನಿಃಶಬ್ದವಾದ ಶಾಂತಿ.

ಹರಾಮಿಕಿಗಾಗಿ